ಪನ್ಯಾಸ
ಥಮಾಲೆ

೧೩೪

ಜಂತುರೋಗಗಳು

ಡಾ|| ಪಿ. ಎಸ್. ಶಂಕರ್
ಎಂ. ಡಿ., ಎಫ್. ಸಿ. ಸಿ. ಪಿ., ಎಫ್. ಐ. ಸಿ. ಎ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನವಂಬರ, ೧೯೭೧

ಜಂತುರೋಗಗಳು

ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬ ★ ಕನ್ನಡ ಸಾಹಿತ್ಯ ಪರಿಷತ್ತು - ಬೆಂಗಳೂರು. ★
ಸಾಹಿತ್ಯ
ಪ್ರಸಾರ
ಯೋಜನೆ

ಉಪನ್ಯಾಸ ಗ್ರಂಥಮಾಲೆ

೧೩೪

ಜಂತು ರೋಗಗಳು

ಡಾ|| ಪಿ. ಎಸ್. ಶಂಕರ್

ಎಂ. ಡಿ., ಎಫ್. ಸಿ. ಸಿ. ಪಿ., ಎಫ್. ಐ. ಸಿ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೭೧

ಪ್ರಕಾಶಕರು:

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: ಡಿಶಂಬರ, ೧೯೭೧
೫,೦೦೦ ಪ್ರತಿಗಳು

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ: ೨೫ ಪೈಸೆ

ಮುದ್ರಕರು:
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ-೩

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವ ವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೧೩೩ ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು–ನಾಲ್ಕು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನ-ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ ಈ ಪುಸ್ತಕಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೮-೧೧-೭೧

ಎ. ಎಸ್. ಅಡಕೆ
ಕುಲಪತಿಗಳು

ಅರಿಕೆ

ಜಗತ್ತಿನ ಎಲ್ಲ ಕಡೆ ಕರುಳುಹುಳು ರೋಗ ಗೋಚರಿಸಿದರೂ ಅದು ಸಾಮಾನ್ಯವಾಗಿ ಉಷ್ಣವಲಯದ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ನೈರ್ಮಲ್ಯವಿಲ್ಲದ ವಾತಾವರಣ ಈ ರೋಗದ ಬೆಳವಣಿಗೆಗೆ ಯೋಗ್ಯ ಪರಿಸರವನ್ನೊದಗಿಸಿ ಕೊಡುತ್ತದೆ.

ಕರುಳು ಹುಳುಗಳು ಅನೇಕ ತೆರನಾದವುಗಳಿದ್ದು ಅವುಗಳಲ್ಲಿ ದುಂಡು ದೇಹ ಹೊಂದಿದ ಜಂತುಗಳು ಪ್ರಮುಖವಾಗಿವೆ. ಅವುಗಳಲ್ಲಿ ಮುಖ್ಯವಾದವು ದುಂಡು ಜಂತು, ಕೊಕ್ಕೆ ಹುಳು ಮತ್ತು ದಾರದ ಹುಳು. ಈ ಜಂತುಗಳು ಕರುಳಿನಲ್ಲಿ ಜೀವಿಸಿ ತಮ್ಮ ವಂಶವೃದ್ಧಿಗೆ ಕಾರಣವಾದ ಮೊಟ್ಟೆಗಳನ್ನು ಹೊರ ಹಾಕುವುವು. ಮೊಟ್ಟೆಗಳು ದೇಹದಲ್ಲಿ ಬೆಳವಣಿಗೆಯನ್ನು ಹೊಂದುವುದಿಲ್ಲವಾದುದರಿಂದ ಅವು ವಿಪುಲ ಸಂಖ್ಯೆಯಲ್ಲಿ ಮಲದಲ್ಲಿ ವಿಸರ್ಜನೆಹೊಂದಿ ಹೊರ ಆವರಣದಲ್ಲಿ ಬೆಳೆಯುತ್ತವೆ. ದುಂಡು ಜಂತು ಮತ್ತು ಕೊಕ್ಕೆ ಹುಳುವಿನ ಮೊಟ್ಟೆಗಳು ಮಲದಿಂದ ಕಶ್ಮಲಗೊಂಡ ನೆಲದಲ್ಲಿ ಬೆಳೆದು ಕ್ರಮವಾಗಿ ಬಾಯಿ ಮತ್ತು ಚರ್ಮದ ಮೂಲಕ ದೇಹವನ್ನು ಸೇರಿ ಬೆಳೆಯುತ್ತವೆ.

ಈ ಹುಳುಗಳ ಇರುವಿಕೆಯಿಂದ ಕರುಳಿನಲ್ಲಿ ತಡೆ, ರಕ್ತಹೀನತೆ, ಚರ್ಮ ತುರಿಕೆ ಕಂಡು ಬಂದು ದೇಹದ ವಿವಿಧ ಅಂಗ

ಭಾಗಗಳಲ್ಲಿ ರೋಗ ಲಕ್ಷಣಗಳನ್ನು ತೋರ್ಪಡಿಸುವುವು. ಇವುಗಳ ಇರುವಿಕೆಯನ್ನು ಸೂಕ್ಷ್ಮದರ್ಶಕದ ಮೂಲಕ ಮಾಡುವ ಮಲ ಪರೀಕ್ಷೆಯಿಂದ ಖಚಿತ ಪಡಿಸಿಕೊಳ್ಳಬಹುದು. ಈ ಹುಳುಗಳ ಚಿಕಿತ್ಸೆಗೆ ಪ್ರಬಲವಾದ ಕರುಳು ಹುಳು ರೋಧಕ ಗಳು ಬಳಕೆಗೆ ಬಂದಿವೆ. ಪುನರಪಿ ಈ ಹುಳುಗಳು ದೇಹದಲ್ಲಿ ಬೆಳವಣಿಗೆ ಹೊಂದುವ ಪ್ರಮೇಯ ಹೆಚ್ಚು. ಅದನ್ನು ಆಗಾಗ್ಗೆ ಮಲಪರೀಕ್ಷೆಯಿಂದ ತಿಳಿದುಕೊಳ್ಳಬಹುದು. ನಮ್ಮ ಇರುವಿ ಕೆಯ ಸುತ್ತಣ ಪರಿಸರದಲ್ಲಿ ನೈರ್ಮಲ್ಯ ಕಾಪಾಡಿಕೊಂಡು, ವೈಯುಕ್ತಿಕ ನೈರ್ಮಲ್ಯಕ್ಕೆ ಆದ್ಯ ಗಮನವಿತ್ತು ಈ ಜಂತುಗಳ ಬೆಳವಣಿಗೆಯನ್ನು ಪ್ರಭಾವಶಾಲಿಯಾಗಿ ತಡೆಗಟ್ಟಬಹುದು.

ಆರೋಗ್ಯದ ಸಹಭಾಗಿಗಳಾದ ಜನಸಾಮಾನ್ಯರಲ್ಲಿ ಕರುಳ ಹುಳುಗಳ ಬಗ್ಗೆ ಮತ್ತು ಅವು ಉಂಟುಮಾಡುವ ರೋಗದ ಬಗ್ಗೆ ತಿಳಿದುಕೊಳ್ಳಬೇಕೆನ್ನುವ ಕುತೂಹಲ ಬೆಳೆಯುತ್ತಿದೆ. ಜಂತುಗಳ ದೈಹಿಕರಚನೆ, ಜೀವನಕ್ರಮ, ಅವುಗಳ ಇರುವಿಕೆ ಯಿಂದ ಬರುವ ರೋಗಲಕ್ಷಣಗಳು, ಚಿಕಿತ್ಸೆ ಮತ್ತು ನಿರೋಧಕ ಕ್ರಮಗಳ ಬಗ್ಗೆ ಪ್ರಚಲಿತವಿರುವ ವಿಷಯವನ್ನು ಈ ಪುಸ್ತಕ ದಲ್ಲಿ ಬರೆಯಲು ಯತ್ನಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಾಖೆಯ ಆಶ್ರಯದಲ್ಲಿ ಮಳಖೇಡದಲ್ಲಿ ಜರುಗಿದ ೧೫೩ನೇ ಉಪನ್ಯಾಸ ಶಿಬಿರದಲ್ಲಿ 'ಜಂತು ರೋಗಗಳ' ಬಗ್ಗೆ ನಾನು ಮಾಡಿದ ಉಪನ್ಯಾಸ ಇದೀಗ ಪುಸ್ತಕ ರೂಪದಲ್ಲಿ ಪ್ರಕಟ ಗೊಳ್ಳುತ್ತಿದೆ. ಇದಕ್ಕೆ ಕಾರಣರಾದ ನಿರ್ದೇಶಕ ಶ್ರೀ ಚೆನ್ನವೀರ

ಕಣವಿಯವರಿಗೆ ಮತ್ತು ಪ್ರಕಾಶಕರಾದ ಕುಲಸಚಿವ ಶ್ರೀ ಎಸ್. ಎಸ್. ಒಡೆಯರ್ ಅವರಿಗೆ ಕೃತಜ್ಞನಾಗಿದ್ದೇನೆ. ಪುಸ್ತಕದಲ್ಲಿ ಅಳವಡಿಸಲಾದ ಚಿತ್ರಗಳನ್ನು ಬರೆದುಕೊಟ್ಟ ಕಲಾವಿದ ಶ್ರೀ ಪ್ರಭಾಕರ್ ಅವರಿಗೆ ನನ್ನ ನೆನಕೆಗಳು.

ಡಿಪಾರ್ಟ್‌ಮೆಂಟ್ ಆಫ್ ಮೆಡಿಸಿನ್
ಮೆಡಿಕಲ್ ಕಾಲೇಜ್, ಗುಲಬರ್ಗಾ		**ಪಿ. ಎಸ್. ಶಂಕರ್**
ಸೆಪ್ಟಂಬರ್ ೨೪, ೧೯೭೧

ಪರಿವಿಡಿ

ಪೀಠಿಕೆ

ಜಗತ್ತಿನಾದ್ಯಂತ ಮಕ್ಕಳು ಮತ್ತು ವಯಸ್ಕರು ದುಂಡು ಜಂತುಗಳನ್ನು ಹೊಂದಿ, ತನ್ಮೂಲಕ ರೋಗವನ್ನು ಹೊಂದ ಬಹುದು. ದೇಶದಿಂದ ದೇಶಕ್ಕೆ ಈ ಜಂತುಗಳ ಸಂಖ್ಯೆ ವ್ಯತ್ಯಾಸ ಹೊಂದುತ್ತದೆ. ಹೆಚ್ಚಾಗಿ ಈ ಹುಳು ರೋಗಗಳು ಅನೈರ್ಮಲ್ಯ ವಾತಾವರಣದಲ್ಲಿ ಜೀವಿಸುವ ಉಷ್ಣವಲಯದ ದೇಶಗಳಲ್ಲಿನ ಜನಗಳಲ್ಲಿ ವಿಶೇಷವಾಗಿ ಕಾಣಸಿಕ್ಕುತ್ತದೆ.

ದುಂಡು ಜಂತುಗಳು ನಿಮೆಥಲ್ಮಿನ್‌ಥಸ್ (Nemathelminths) ಗುಂಪಿಗೆ ಸೇರಿದವುಗಳಾಗಿವೆ. ಅವುಗಳಲ್ಲಿ ಮುಖ್ಯ ವಾದುವು ದುಂಡುಜಂತು (Round worm), ಕೊಕ್ಕೆಹುಳು (Hook worm) ಮತ್ತು ದಾರದ ಹುಳು (Thread worm).

ಈ ಹುಳುಗಳು ದುಂಡನೆಯ ದೇಹವನ್ನು ಪಡೆದು, ನೀಳ ತುದಿಯನ್ನು ಹೊಂದಿವೆ. ಬಣ್ಣ ಬಿಳುಪು. ಅವುಗಳಲ್ಲಿ ಲಿಂಗ ಭೇದವಿದ್ದು ಹೆಣ್ಣು ಜಂತು, ಗಂಡು ಜಂತಿಗಿಂತ ಉದ್ದವಾಗಿರುತ್ತದೆ. ಈ ಜಂತುಗಳ ವಾಸ ಸಣ್ಣ ಕರುಳಿನ ಮೊದಲ ಮತ್ತು ಮಧ್ಯ ಭಾಗದಲ್ಲಿ (ದುಂಡುಜಂತು, ಕೊಕ್ಕೆಹುಳು) ಅಥವಾ ಸಣ್ಣ ಕರುಳಿನ ಅಂತ್ಯ ಭಾಗ ಮತ್ತು ದೊಡ್ಡ ಕರುಳಿನ ಆದಿ ಭಾಗದಲ್ಲಿ (ದಾರದ ಹುಳು). ಪಚನಗೊಂಡ ಆಹಾರದ ಮಧ್ಯ ಇವುಗಳು ಜೀವಿಸುವುದರಿಂದ ಅವುಗಳಲ್ಲಿ ಅನ್ನನಾಳಕ್ಕೆ,

ಚಲನಾಂಗಗಳಿಗೆ ಮಹತ್ವವಿಲ್ಲ. ಜನನೇಂದ್ರಿಯಗಳ ಬೆಳವಣಿಗೆ ವಿಶೇಷವಾಗಿದ್ದು ತನ್ಮೂಲಕ ವಿಪುಲವಾಗಿ ಮೊಟ್ಟೆಗಳನ್ನು ವಿಸರ್ಜನೆಗೊಳಿಸುತ್ತವೆ. ತಮ್ಮ ವಂಶ ನಾಶಗೊಳ್ಳದಂತೆ ಕಾಯ್ದಿಟ್ಟುಕೊಳ್ಳಲು ಅದು ಅಗತ್ಯವಾಗಿದೆ.

ಜಂತುಗಳ ಸಂಖ್ಯೆ ಕರುಳಿನಲ್ಲಿಯೇ ಉಳಿದು ವೃದ್ಧಿಗೊಳ್ಳುವುದಿಲ್ಲವಾದುದರಿಂದ ಅವುಗಳ ಮೊಟ್ಟೆಗಳು ಕರುಳಿನಿಂದ ಹೊರಬಂದು ಹೊರ ವಾತಾವರಣದಲ್ಲಿ ಬೆಳೆದು ಮರಿಯನ್ನು ರೂಪುಗೊಳಿಸಬೇಕು. ದುಂಡು ಜಂತು ಮತ್ತು ಕೊಕ್ಕೆಹುಳುವಿನ ಮೊಟ್ಟೆಗಳು ೮–೧೦ ದಿನ ಹೊರ ಆವರಣದ ನೆಲದಲ್ಲಿ ಬೆಳೆದು ದೇಹದೊಳಸೇರಬೇಕಾಗುತ್ತದೆ. ದಾರದ ಹುಳುವಿನ ಮೊಟ್ಟೆಗಳು ಗುದ ಪ್ರದೇಶಕ್ಕೆ ಅಂಟಿಕೊಂಡು ಅಲ್ಲಿಯೇ ಬೆಳೆದು ಮಲಿನಗೊಂಡ ಬೆರಳಿನ ಮೂಲಕ ದೇಹವನ್ನು ಒಳಸೇರಿ ಬೆಳೆಯುವ ಶಕ್ತಿಯನ್ನು ಪಡೆದಿವೆ. ದುಂಡುಜಂತಿನ ಮೊಟ್ಟೆ ಬೆಳೆದು, ಅದರೊಳಗೆ ಮರಿ ರೂಪುಗೊಂಡ ಮೇಲೆ ಅದು ಮಲಿನಗೊಂಡ ಆಹಾರ–ಪಾನೀಯದ ಮೂಲಕ ದೇಹದೊಳ ಸೇರುತ್ತದೆ. ಕೊಕ್ಕೆ ಹುಳುವಿನ ಮೊಟ್ಟೆಯು ಬೆಳೆದು ಅದರ ಮರಿಯು ಹೊರಬಂದು ಕಶ್ಮಲಗೊಂಡ ನೆಲದ ಮೇಲೆ ಬರಿಗಾಲಿನಲ್ಲಿ ನಡೆಯುವ ವ್ಯಕ್ತಿಯ ಪಾದದ ಚರ್ಮವನ್ನು ಕೊರೆದುಕೊಂಡು ದೇಹವನ್ನು ಸೇರುತ್ತದೆ.

ಜಂತುಹುಳು ಮತ್ತು ದಾರದ ಹುಳು ಮಕ್ಕಳಲ್ಲಿ ವಿಶೇಷ. ಆದರೂ ದೊಡ್ಡವರು ಅವುಗಳಿಗೆ ಹೊರತಲ್ಲ. ಕೊಕ್ಕೆ ಹುಳು ಎಲ್ಲರಲ್ಲಿಯೂ ಬೆಳೆಯಬಹುದು. ಅದು ಬೆಳೆದು ದೇಹದಲ್ಲಿನ

ರಕ್ತ ಹೀರಿ, ರಕ್ತಹೀನತೆಯನ್ನುಂಟುಮಾಡಿ ತೀವ್ರತೆರನಾದ ಗುಣಲಕ್ಷಣಗಳನ್ನು ಪ್ರಕಟಪಡಿಸುತ್ತದೆ. ಈ ಹುಳುಗಳು ಉಂಟುಮಾಡುವ ರೋಗವನ್ನು ದುಂಡು ಜಂತುರೋಗ (Ascariasis), ಕೊಕ್ಕೆ ಹುಳು ರೋಗ (Ankylostomiasis) ಮತ್ತು ದಾರದ ಹುಳು ರೋಗ (Enterobiasis) ಎಂದು ವಿಂಗಡಿಸಲಾಗಿದೆ.

ಕರುಳಿನಲ್ಲಿ ಈ ಹುಳುಗಳು ಇರುವುದನ್ನು, ಸೂಕ್ಷ್ಮ ದರ್ಶಕದ ಮೂಲಕ ಮಾಡುವ ಮಲಪರೀಕ್ಷೆಯಿಂದ ದೃಢ ಪಡಿಸಿಕೊಳ್ಳಬಹುದು. ಹುಳು ಕರುಳಿನಲ್ಲಿ ಬೆಳೆಯುತ್ತಿದ್ದಾಗ ಅವು ವಿಪುಲ ಸಂಖ್ಯೆಯಲ್ಲಿ ಮೊಟ್ಟೆಗಳನ್ನು ಮಲದಲ್ಲಿ ವಿಸರ್ಜಿಸುವುವು.

ಕರುಳು ಹುಳು ರೋಧಕಗಳ ಉಪಯೋಗದಿಂದ ಈ ಜಂತುಗಳನ್ನು ದೇಹದಿಂದ ಹೊರಹಾಕಬಹುದು. ಆಗಾಗ್ಗೆ ಈ ಹುಳುಗಳನ್ನು ಮರಳಿ ಪಡೆಯಬಹುದಾದ ಪ್ರಮೇಯಗಳು ವಿಪುಲವಾಗಿರುವುದರಿಂದ ಆಗಾಗ್ಗೆ ಮಲಪರೀಕ್ಷೆಯನ್ನು ಮಾಡಿಸುವುದು ಅಗತ್ಯವಾಗಿದೆ. ರೋಗದ ಚಿಕಿತ್ಸೆಯಲ್ಲಿ ಹುಳುಗಳ ನಾಶದತ್ತ ಗಮನಕೊಟ್ಟಂತೆ, ಅವು ಪ್ರಕಟಪಡಿಸುವ ರೋಗ ಲಕ್ಷಣಗಳ ಚಿಕಿತ್ಸೆಯತ್ತ ಸಹ ಗಮನಕೊಡುವುದು ಅಗತ್ಯ ವಾಗಿದೆ. ಅದರಲ್ಲೂ ಮುಖ್ಯವಾಗಿ ಕೊಕ್ಕೆಹುಳು ಉದ್ಭವ ಗೊಳಿಸುವ ರಕ್ತಹೀನತೆಯನ್ನು ಕಬ್ಬಿಣದ ಅಂಶದ ಔಷಧಿಗಳ ಸೇವನೆಯಿಂದ ದೂರಮಾಡಿ ರಕ್ತವರ್ಣದ ತಯಾರಿಕೆ ಚೆನ್ನಾಗಿ ಜರುಗುವಂತೆ ಮಾಡಬೇಕಾಗುತ್ತದೆ.

ಈ ಎಲ್ಲ ದುಂಡುಜಂತುಗಳ ಬೆಳವಣಿಗೆಯನ್ನು ಪರಿಶೀಲಿಸಿದಾಗ ಅನೈರ್ಮಲ್ಯ ಜೀವನ, ಕೊಳಿಪ್ರವೃತ್ತಿಗಳು, ಸಿಕ್ಕ ಸಿಕ್ಕ ಕಡೆ ಮಾಡುವ ಮಲವಿಸರ್ಜನೆ ಹುಳುವಿನ ಇರುವಿಕೆಗೆ ಯೋಗ್ಯ ಭೂಮಿಕೆಯನ್ನು ಒದಗಿಸಿಕೊಡುವುದು ಗೋಚರವಾಗುತ್ತದೆ. ಮಲಿನಗೊಂಡ ಆಹಾರ ಸೇವನೆ ದುಂಡುಜಂತುವಿನ ಮೊಟ್ಟೆಗಳು ಒಳಸೇರಲು ಅವಕಾಶ ಮಾಡಿಕೊಡುತ್ತದೆ. ಬರಿಗಾಲಿನಲ್ಲಿ, ಕಶ್ಮಲಗೊಂಡ ನೆಲದ ಮೇಲೆ ನಡೆದಾಡುವ ವ್ಯಕ್ತಿ ಕೊಕ್ಕೆಹುಳು ಮರಿಯನ್ನು ಒಳಕ್ಕೆ ಸೇರಿಸಿಕೊಳ್ಳಬಲ್ಲ: ವೈಯಕ್ತಿಕ ನೈರ್ಮಲ್ಯವಿಲ್ಲದ ಮಕ್ಕಳು ಪದೇಪದೇ ದಾರದ ಹುಳುವಿನ ಮೊಟ್ಟೆಗಳನ್ನು ಸೇವಿಸಬಲ್ಲವರಾಗಿದ್ದಾರೆ.

ನೈರ್ಮಲ್ಯ ಜೀವನ ಕರುಳಿನಲ್ಲಿನ ದುಂಡು ಜಂತು ರೋಗಗಳನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಆ ತೆರನಾದ ನೈರ್ಮಲ್ಯ ವೈಯಕ್ತಿಕವೂ ಮತ್ತು ಸಾಮಾಜಿಕವೂ ಆಗಿದೆ. ವ್ಯಕ್ತಿಯ ಕಿರಿದುಗೊಂಡ ಉಗುರು, ಕೊಳೆ ಸೇರದ ಬೆರಳು, ಮಲವಿಸರ್ಜನೆಯ ನಂತರ ಕೈತೊಳೆದುಕೊಳ್ಳುವಿಕೆ, ಊಟದ ಮೊದಲು ಕೈ ಶುಭ್ರಗೊಳಿಸುವಿಕೆ, ತೊಳೆದ ತರಕಾರಿ ಸೇವನೆ, ಶುಭ್ರವಾದ ಹಾಸಿಗೆ ಬಟ್ಟೆಗಳ ಉಪಯೋಗ, ಕಾಲಿಗೆ ಪಾದರಕ್ಷೆಯ ಉಪಯೋಗದಿಂದ ವ್ಯಕ್ತಿಯು ದುಂಡು ಜಂತುಗಳನ್ನು ದೇಹದೊಳಸೇರದಂತೆ ತಡೆಯನ್ನುಂಟುಮಾಡಬಲ್ಲ. ಮಲವಿಸರ್ಜನೆಗೆ ಯೋಗ್ಯ ಸ್ಥಳಗಳ ನಿರ್ಮಾಣ, ಮಲವು ಸೇವಿಸುವ ಆಹಾರ-ಪಾನೀಯಗಳನ್ನು ಕಲುಷಿತ

ಗೊಳಿಸದಂತೆ ನೋಡಿಕೊಳ್ಳುವುದು ಮತ್ತು ರೋಗಹೊಂದಿದ ವ್ಯಕ್ತಿಗಳ ಚಿಕಿತ್ಸೆಯಿಂದ ಸಮಾಜದಲ್ಲಿ ಕರುಳು ಹುಳುಗಳ ಸಂಖ್ಯೆಯನ್ನು ಪರಿಣಾಮಕಾರಿಯಾಗಿ ಕೆಳಗಿಳಿಸಬಹುದು. ಸಮಾಜವು ನೆಲವನ್ನು ಕಶ್ಮಲಗೊಳಿಸುವ ಪ್ರಮಾಣವನ್ನನುಸರಿಸಿ ದುಂಡುಜಂತಿನ ರೋಗವನ್ನು ಮರಳಿ ಪಡೆಯುತ್ತದೆ.


ದುಂಡು ಜಂತುರೋಗ

ಅಸ್ಕಾರಿಸ್ ಲಂಬ್ರಿಕಾಯ್ಡಿಸ್ (Ascaris lumbricoides) ಎಂದು ಕರೆಯಲ್ಪಡುವ ದುಂಡು ಜಂತು ಜಗತ್ತಿನಾದ್ಯಂತ ಹರಡಿದ್ದು ಅದು ಉಷ್ಣವಲಯದಲ್ಲಿನ ಮಕ್ಕಳಲ್ಲಿ ವಿಶೇಷವಾಗಿ ಗೋಚರಿಸುತ್ತದೆ. ಅದರ ವಾಸ ಸಣ್ಣ ಕರುಳಿನ ಮೊದಲನೆಯ ಮತ್ತು ಎರಡನೆಯ ಭಾಗವಾದ ದುರಾರ್ಗರುಳು (Duodenum) ಮತ್ತು ಮುಂಗರುಳಿ (Jejunum)ನಲ್ಲಿ. ಸಾಮಾನ್ಯವಾಗಿ ಈ ಹುಳುವನ್ನು ಜಂತು ಎಂದು ಕರೆಯುತ್ತಾರೆ. ಆ ಶಬ್ದವೇ ಹೆಚ್ಚು ಪ್ರಚಲಿತವಿದೆ.

ದೈಹಿಕ ರಚನೆ

ಜಂತಿನ ದೇಹ ದುಂಡಗಿದ್ದು, ಅದು ಆರರಿಂದ ಹದಿನಾರು ಇಂಚು ಉದ್ದವಾಗಿರುತ್ತದೆ. ಅದರ ಬಣ್ಣ ಬಿಳಿಯದು; ತುದಿ ಮೊನೆಚು. ಅದು ಸಣ್ಣ ಕರುಳಿನಲ್ಲಿ ಸ್ವಾತಂತ್ರ್ಯವಾಗಿ ತೇಲಾಡುತ್ತದೆ. ಇದರಲ್ಲಿ ಗಂಡು-ಹೆಣ್ಣುಗಳೆಂಬ ಲಿಂಗ ಭೇದವಿದೆ. ಗಂಡು ಜಂತಿನ ಉದ್ದ ಹೆಣ್ಣು ಜಂತಿಗಿಂತ ಚಿಕ್ಕದು. ಅದರ ತುದಿ ಬಾಗಿದ್ದು ಅಲ್ಲಿ ಎರಡು ಸಂಭೋಗಮೊನೆ (Copulatary Spicules) ಗಳನ್ನು ಪಡೆದಿದೆ. ಹೆಣ್ಣು ಜಂತಿನ ತುದಿ ಉದ್ದನಾಗಿ ನೇರವಾಗಿದೆ. (ಚಿತ್ರ ೧).

ಜಂತಿನ ಬಾಯಿಯಲ್ಲಿ ಮೂರು ತುಟಿಗಳಿವೆ. ಅದರ ಒಳ ಅಂಗ ರಚನೆ ಹೆಚ್ಚು ಕ್ಲಿಷ್ಟಕರವಲ್ಲ. ಅದರ ವಾಸಸ್ಥಾನ



ಚಿತ್ರ ೧

ಹೆಣ್ಣು ಮತ್ತು ಗಂಡು ಜಂತುಗಳು

ಸಣ್ಣ ಕರುಳಾದುದರಿಂದ ಅದು ಚೆನ್ನಾಗಿ ಪಚನಗೊಂಡ ಆಹಾರವನ್ನು ಹೀರಿ ಜೀವಿಸಬಲ್ಲುದುದಾಗಿದೆ. ಅದಕ್ಕೆ ಅನ್ನಕೋಶ-ನಾಳದ ಅಗತ್ಯವಿಲ್ಲ. ಅದರ ಒಂದು ಕಡೆ ಬಾಯಿ–ಮತ್ತೊಂದು

ಕಡೆ ಗುದದ್ವಾರ. ಹುಳುವಿಗೆ ಜನನೇಂದ್ರಿಯವೇ ಮುಖ್ಯ. ತನ್ನ ವಂಶವೃದ್ಧಿಗೆ ವಿಪುಲ ಸಂಖ್ಯೆಯಲ್ಲಿ ಮೊಟ್ಟೆಗಳನ್ನಿಡಬಲ್ಲ ಶಕ್ತಿಯನ್ನು ಪಡೆದಿದೆ. ಹುಳುವಿಗೆ ಚಲನಾಂಗವಿಲ್ಲವಾದರೂ ಅದು ತನ್ನ ಸ್ನಾಯುವಿನ ಸಂಕುಚನದಿಂದ ಮುಂದಕ್ಕೆ ಚಲಿಸಬಲ್ಲದು.

ಜೀವನ ಕ್ರಮ

ದುಂಡು ಜಂತು ದಿನಕ್ಕೆ ಎರಡು ಲಕ್ಷ ಮೊಟ್ಟೆಗಳನ್ನಿಡಬಲ್ಲ ಶಕ್ತಿಯನ್ನು ಪಡೆದಿದೆ. ಅದು ಹುಳುವಿನ ವಂಶ ನಾಶಹೊಂದದೆ ಇರಲು ತುಂಬಾ ಅಗತ್ಯವಾಗಿದೆ. ಮೊಟ್ಟೆಗಳು ಮಲದೊಡನೆ ವಿಸರ್ಜನೆಗೊಂಡು ತೇವದಿಂದ ಕೂಡಿದ ನೆಲದಲ್ಲಿ ಬೆಳವಣಿಗೆಯನ್ನು ಹೊಂದುತ್ತವೆ. ಮೊಟ್ಟೆಗಳು ಬಲವಾದ ಹೊರ ಪದರನ್ನು ಹೊಂದಿದ್ದು, ಅವು ವಾತಾವರಣದ ಬದಲಾವಣೆಗೆ ನಾಶಗೊಳ್ಳದೆ ಹತ್ತು ದಿನಗಳಲ್ಲಿ ಅದರೊಳಗೆ ಮರಿಯು ಬೆಳವಣಿಗೆಯಾಗುತ್ತದೆ. ಆಗ ಅವು ದೇಹವನ್ನು ಸೇರಿದರೆ ಅವು ದೊಡ್ಡ ಹುಳುಗಳಾಗಿ ಬೆಳೆಯಬಲ್ಲವು. ಮರಿ ಹುಳುವಿನ ಬೆಳವಣಿಗೆಗೆ ಮೊಟ್ಟೆಯ ಹೊರ ಆವರಣದಲ್ಲಿ ಇರಬೇಕಾದುದು ಅಗತ್ಯ.

ಒಳಗೆ ಮರಿ ರೂಪುಗೊಂಡ ಮೊಟ್ಟೆಗಳಿರುವ ಮಲ ಅಥವಾ ಕಶ್ಮಲ, ತಿನ್ನುವ ಆಹಾರ, ತರಕಾರಿ ಅಥವಾ ಕುಡಿಯುವ ನೀರು, ಪಾನೀಯದೊಡನೆ ಮಿಶ್ರಗೊಂಡು ಅದನ್ನು ಮಲಿನಗೊಳಿಸುವುದು. ಅದನ್ನು ಮನುಷ್ಯ ಸೇವಿಸಿದರೆ ಮೊಟ್ಟೆ

ಗಳು ನುಂಗಲ್ಪಟ್ಟು ಕರುಳನ್ನು ಸೇರುತ್ತವೆ. ಈ ತೆರನಾಗಿ ಹೊರ ಆವರಣದಲ್ಲಿ ಬೆಳವಣಿಗೆ ಹೊಂದದ ಮೊಟ್ಟೆಗಳನ್ನು ವಿಸರ್ಜನೆಗೊಂಡ ಸ್ವಲ್ಪವೇ ಅವಧಿಯಲ್ಲಿ ಸೇವಿಸಿದರೆ ಅವು ದೇಹದಲ್ಲಿ ಬೆಳವಣಿಗೆಯನ್ನು ಹೊಂದುವುದಿಲ್ಲ.

ಬೆಳವಣಿಗೆಹೊಂದಿದ ಮೊಟ್ಟೆಯು ಸಣ್ಣ ಕರುಳನ್ನು ಸೇರಿದ ಮೇಲೆ ಅಲ್ಲಿಂದ ಉದ್ದನೆಯ ಮರಿಹುಳು ಹೊರಬರುತ್ತದೆ. ಅದರ ಬೆಳವಣಿಗೆಗೆ ರಕ್ತಸ್ನಾನ ಅಗತ್ಯ. ಅದಕ್ಕಾಗಿ ಅದು ಕರುಳಿನ ಹೊರಗೆ ದೇಹಯಾತ್ರೆ ಕೈಕೊಳ್ಳಬೇಕಾಗುವುದು. ಮರಿಹುಳು ಕರುಳ ಲೋಳ್ಪರೆಯ ಮೂಲಕ ಅದರಲ್ಲಿನ ರಕ್ತನಾಳದೊಳಹೊಕ್ಕು, ರಕ್ತದ ಮೂಲಕ ಕಲಿಜ, ಬಲಹೃದಯ ಮತ್ತು ಶ್ವಾಸಕೋಶದ ರಕ್ತನಾಳವನ್ನು ತಲುಪುತ್ತದೆ. ಅಲ್ಲಿನ ಲೋಮನಾಳಗಳಿಂದ ಹೊರಬಂದು ಗಾಳಿಗೂಡಿನೊಳಗೆ ನುಸಿಯುತ್ತದೆ. ಅಲ್ಲಿಂದ ಅದು ಉಸಿರುನಾಳದ ಕವಲುಗಳ ಮೂಲಕ ಮೇಲೇರಿ ಕಿರುನಾಲಿಗೆಯನ್ನು ಮುಟ್ಟಿ, ಅಲ್ಲಿಂದ ನುಂಗಲ್ಪಟ್ಟು ಅನ್ನನಾಳದೊಳಸೇರುತ್ತದೆ. ಈ ಸಂಚಾರದ ಅವಧಿಯಲ್ಲಿ ಮರಿಹುಳು ತನ್ನ ಹೊರಪೊರೆಯನ್ನು ಕಳಚಿ ದೊಡ್ಡದಾಗುತ್ತದೆ. ಅದು ಕರುಳನ್ನು ಸೇರಿದ ಮೇಲೆ ದೊಡ್ಡದಾಗಿ ಬೆಳೆದು ಪ್ರೌಢಾವಸ್ಥೆಯನ್ನು ತಲುಪುವುದು.

ಗುಣಲಕ್ಷಣಗಳು

ಜಂತುಹುಳು ಕರುಳಿನಲ್ಲಿ ಯಾವ ಗುಣಲಕ್ಷಣಗಳನ್ನೂ ತೋರ್ಪಡಿಸದೆ ಇರಬಹುದು. ಅದರ ಇರುವಿಕೆಯು ಆಗಾಗ್ಗೆ

ಮಲದಲ್ಲಿ ಜಂತು ವಿಸರ್ಜನೆಗೊಂಡಾಗ ತೋರಿಬರುತ್ತದೆ. ಕೆಲವು ಬಾರಿ ಅದು ವಾಂತಿಯಾದಾಗಲೂ ಹೊರಬರಬಹುದು.

ಇವುಗಳ ಸಂಖ್ಯೆ ವಿಪುಲಗೊಂಡು ಕರುಳಿನಲ್ಲಿ ತಡೆಯನ್ನುಂಟುಮಾಡಿ (Intestinal obstruction) ಮಾಡಿ ಹೊಟ್ಟೆನೋವು, ಬಾವು, ವಾಂತಿ, ಮಲಬದ್ಧತೆಯ ಗುಣಲಕ್ಷಣಗಳನ್ನು ತೋರಿಸಬಹುದು. ಈ ತೆರನಾದ ಗುಣಲಕ್ಷಣಗಳು ತೀವ್ರತೆರನಾಗಿ ಕಂಡುಬಂದಾಗ ಅದು ಬೇರೆ ಕಾರಣಗಳಿಂದ ಉಂಟಾದುದೆಂದು ಶಸ್ತ್ರಚಿಕಿತ್ಸೆಗಾಗಿ ಹೊಟ್ಟೆಯನ್ನು ಕೊಯ್ದು ಮುಚ್ಚಿದ ಉದಾಹರಣೆಗಳು ಆಗಾಗ್ಗೆ ಕಾಣಸಿಕ್ಕುತ್ತವೆ.

ಈ ಹುಳುಗಳು ಪಿತ್ತನಾಳದ (Bile duct) ದ್ವಾರವನ್ನು ಇಲ್ಲವೆ ಕರುಳಿನ ಅನುಬಂಧದಂತಿರುವ ನಾಳದ (Appendix) ದ್ವಾರವನ್ನು ಮುಚ್ಚಿ ಅನುಕ್ರಮವಾಗಿ ಕಾಮಾಲೆ (Jaundice) ಮತ್ತು ತೀವ್ರ ತೆರನಾದ ನೋವನ್ನುಂಟುಮಾಡಬಹುದು. ಜಂತು ಅನ್ನನಾಳದ ಮೂಲಕ ಮೇಲಕ್ಕೇರಿ ಕಿರುನಾಲಿಗೆ ಮುಟ್ಟಿ ಅಲ್ಲಿ ಉಸಿರುನಾಳಕ್ಕೆ ಅಡ್ಡಿಯನ್ನುಂಟುಮಾಡಿ ಉಸಿರಾಟದ ತೊಂದರೆಗೆ ಕಾರಣವಾಗಬಹುದು.

ಮಕ್ಕಳಲ್ಲಿ ನರವ್ಯೂಹದ ಪರಾವೃತ್ತ (Reflex)ವುಂಟಾಗಿ ಮಾನಸಿಕ ಅಸ್ಥಿರತೆ, ಕಿರಿಕಿರಿ, ಮೂಗು ಕೆರೆತ, ಹಲ್ಲು ಕಚ್ಚುವುದು, ಮತ್ತು ಮೂರ್ಛೆ (Convulsions) ರೋಗದ ಗುಣಲಕ್ಷಣಗಳನ್ನು ತೋರ್ಪಡಿಸಬಹುದು. ಜಂತು ಹುಳುವಿನ


ಇರುವಿಕೆಯ ಫಲವಾಗಿ ವಿಷಾರಿ (Toxic) ಗುಣಲಕ್ಷಣಗಳಾಗಿ ಆಗಾಗ್ಗೆ ಜ್ವರ, ಬಿಳಿಚಿಕೊಂಡ ಶರೀರ, ತೂಕದ ಇಳುವರಿ, ಸುಸ್ತು, ಕಣ್ಣು ಉರಿ, ಮೈಮೇಲೆ ಕೆಂಪಡರಿದ ಗಾದರೆ, ತುರಿಕೆ (Itching), ಹೊಟ್ಟೆನೋವು, ವಾಂತಿ, ಹಸಿವೆಯಲ್ಲಿ ಬದಲಾವಣೆ, ಭೇದಿ ತೋರಿಬರಬಹುದು.

ಮರಿಹುಳು ಬೆಳವಣಿಗೆ ಹೊಂದುತ್ತಿರುವ ಅವಧಿಯಲ್ಲಿ ಅದು ಗಾಳಿಗೂಡಿನ ಮೂಲಕ ಹಾಯ್ದು ಹೋಗುವಾಗ ಪುಪ್ಪುಸದ ಉರಿಯುಂಟಾಗಿ ಕೆಮ್ಮು, ಜ್ವರ, ರಕ್ತಕಫ(Haemoptysis) ದ ಗುಣಲಕ್ಷಣಗಳು ತೋರಿಬರುತ್ತವೆ. ಆಗ ರಕ್ತದಲ್ಲಿ ಕಂದು ಕಣಗಳ ಸಂಖ್ಯೆ ಏರಿರುತ್ತದೆ. ಎದೆಚಿತ್ರ (Chest X ray) ದಲ್ಲಿ ತಾತ್ಕಾಲಿಕವಾಗಿ ಬಿಳಿಯ ಛಾಯೆ ತೋರಿಬರುತ್ತದೆ.

ರೋಗ ನಿದಾನ

ಈ ರೋಗವನ್ನು ಉಂಟುಮಾಡುವ ಜಂತು ಹುಳು ಕರುಳಿನಲ್ಲಿ ಇರುವದನ್ನು ಮಲ ಪರೀಕ್ಷೆಯ ಮೂಲಕ ದೃಢ ಪಡಿಸಿಕೊಳ್ಳಬೇಕು. ಗಾಜಿನ ಹಲಗೆಯ ಮೇಲೆ ಮಲವನ್ನು ಹರಡಿ ಪಾರದರ್ಶಕ ಗಾಜಿನ ತುಂಡನ್ನು ಅದರ ಮೇಲಿಟ್ಟು, ಸೂಕ್ಷ್ಮದರ್ಶಕದ ಮೂಲಕ ನೋಡಿದಾಗ ಜಂತುಹುಳುವಿನ ಮೊಟ್ಟೆಗಳು ಗೋಚರವಾಗುವುವು. ಮೊಟ್ಟೆಗಳು ಒಳಗೆ ಭ್ರೂಣವನ್ನು ಹೊಂದಿ, ದುಂಡಗಿದ್ದು, ದಪ್ಪವಾದ ಹೊರ

ಪದರನ್ನು ಪಡೆದಿವೆ. ಆ ಪದರು ಮುಳ್ಳಿನಂತೆ ಉರುಟಾಗಿದ್ದು ಮಾಸಲು ಹಳದಿ ಬಣ್ಣವನ್ನು ಪಡೆದಿದೆ (ಚಿತ್ರ ೨).



ಚಿತ್ರ ೨
ಜಂತುಹುಳುವಿನ ಮೊಟ್ಟೆ

ಈ ರೀತಿಯ ಮೊಟ್ಟೆಗಳನ್ನು ನೋಡಿದ ಮೇಲೆ ರೋಗದ ಕಾರಣ ದುಂಡು ಜಂತು ಎಂಬುದನ್ನು ದೃಢವಾಗಿ ಹೇಳಬಹುದು.

ಚಿಕಿತ್ಸೆ

ಪಿಪರ್ಜಿನ್ (Piperzines) ಔಷಧಗಳು ಈ ಹುಳುವಿನ ವಿರುದ್ಧ ಪರಿಣಾಮಕಾರಿಯಾದ ಕರುಳುಹುಳು ರೋಧಕ (Anthelmintic). ಈ ಔಷಧದ ಬೇರೆ ಬೇರೆ ಲವಣಗಳು ಸಿಟ್ರೇಟ್, ಅಡಿಪೇಟ್, ಫಾಸ್ಫೇಟ್, ಟಾರ್ಟರೇಟ್ ರೂಪದಲ್ಲಿ ದೊರೆಯುತ್ತದೆ. ಅವುಗಳಲ್ಲಿ ಆಯ್ಕೆ ಮಾಡುವ ಕ್ರಮ ಬೇಡ.

ಏಕೆಂದರೆ ಎಲ್ಲ ತೆರನಾದ ಲವಣಗಳೂ ಪರಿಣಾಮಕಾರಿಯಾಗಿ ಕೆಲಸಮಾಡುವ ಸಾಮರ್ಥ್ಯವನ್ನು ಪಡೆದಿವೆ. ಈ ಔಷಧಿಯನ್ನು ವ್ಯಕ್ತಿಯ ಒಂದು ಕೆ. ಜಿ. ತೂಕಕ್ಕೆ ೧೫೦ ಮಿಲಿಗ್ರಾಂನಂತೆ ಕೊಡಬೇಕು. ಅದನ್ನು ಎರಡರಿಂದ ನಾಲ್ಕು ಗ್ರಾಮ್‌ನಷ್ಟು ಒಮ್ಮೆ ಸೇವಿಸಬಹುದು. ಈ ಔಷಧವನ್ನು ಗುಳಿಗೆಯ ರೂಪದಲ್ಲಿ ಅಥವಾ ರಸಾಯನ (Syrup) ರೂಪದಲ್ಲಿ ಸೇವಿಸಬಹುದು. ರಾತ್ರಿಯ ವೇಳೆಯಲ್ಲಿ ಅದನ್ನು ಸೇವಿಸಿದರೆ ಸಾಕು: ಅದಕ್ಕಾಗಿ ಉಪವಾಸದ ಅಗತ್ಯವಿಲ್ಲ; ಅನಂತರ ವಿರೇಚಕ (Purgative)ದ ಅಗತ್ಯವೂ ಇಲ್ಲ.

ಹಿಂದೆ ಈ ರೋಗದ ಚಿಕಿತ್ಸೆಗೆ ಸ್ಯಾಂಟೋನಿನ್ ಜಂತಿನ ಪುಡಿಯನ್ನು ಸೋಡಿಯಂ ಬೈಕಾರ್ಬೋನೇಟ್ ಜೊತೆ ಮಿಶ್ರ ಮಾಡಿ ರಾತ್ರಿಯ ವೇಳೆಯಲ್ಲಿ ಕೊಡಲಾಗುತ್ತಿದ್ದಿತು. ಹೆಕ್ಸೈಲ್ ರಿಸಾರ್ಸಿನಾಲ್ ಔಷಧವನ್ನು ೧ ಗ್ರಾಂ ಪ್ರಮಾಣದಲ್ಲಿ ಔಷಧಕೋಶ (Capsule) ದಲ್ಲಿ ಇರಿಸಿ ಮುಂಜಾನೆ ಬರೀ ಹೊಟ್ಟೆಯಲ್ಲಿ ಸಹ ತೆಗೆದುಕೊಳ್ಳಬಹುದು.

ಹುಳುಗಳು ಕರುಳಿನಲ್ಲಿ ತುಂಬಾ ಜಾಸ್ತಿಯಿದ್ದಾಗ ಅವು ಚೆಂಡಿನಂತೆ ದುಂಡಗೆ ಒಟ್ಟಾಗಿ ಒಂದಕ್ಕೊಂದು ಸೇರಿಕೊಂಡು ಕರುಳಿನಲ್ಲಿ ತಡೆಯನ್ನುಂಟುಮಾಡಬಹುದಾದುದರಿಂದ ಔಷಧವನ್ನು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಕೊಟ್ಟು ಹುಳುಗಳ ವಿಸರ್ಜನೆ ನಿಧಾನವಾಗಿ ಜರುಗುವಂತೆ ನೋಡಿಕೊಳ್ಳಬೇಕಾಗುವುದು. ದುಂಡು ಜಂತಿನ ಜೊತೆ ಕೊಕ್ಕೆ ಹುಳುಗಳೂ ಕರುಳಿನಲ್ಲಿದ್ದಾಗ ದುಂಡು ಜಂತಿನ ಕರುಳು ಹುಳು ರೋಧಕವನ್ನು

ಮೊದಲು ಕೊಟ್ಟು ಅವು ವಿಸರ್ಜನೆಯಾಗುವಂತೆ ಮಾಡಬೇಕು. ಅದಲ್ಲದೆ ಕೊಕ್ಕೆ ಹುಳು ರೋಧಕವನ್ನುಪಯೋಗಿಸಿದರೆ ಕರುಳಿನಲ್ಲಿ ಉರಿಯುಂಟಾಗಿ ದುಂಡು ಜಂತು ಚಲಿಸಿ ಕರುಳಿನಲ್ಲಿ ತಡೆಯನ್ನುಂಟು ಮಾಡುವ ಭೀತಿಯಿದೆ. ಕೊಕ್ಕೆ ಹುಳುವಿನ ಮೇಲೆ ಕೆಲಸ ಮಾಡುವ ಬೆಫೆನಿಯಂ ಔಷಧ ಜಂತಿನ ಮೊಟ್ಟೆಗಳ ಸಂಖ್ಯೆಯನ್ನು ಪರಿಣಾಮಕಾರಿಯಾಗಿ ಕೆಳಗಿಳಿಸಬಲ್ಲದು.

ಈಚೆಗೆ ಬಳಕೆಗೆ ಬಂದಿರುವ ಡೈಥೆಯಾಜಿನಿನ್ ಅಯೊಡೈಡ್ ಔಷಧಿಯನ್ನು ೧೦೦ ರಿಂದ ೨೦೦ ಮಿಲಿಗ್ರಾಂನಷ್ಟು ದಿನಕ್ಕೆ ಮೂರು ಬಾರಿ ಐದು ದಿನಗಳ ಪರ್ಯಂತ ಇಲ್ಲವೆ ಡೈಮ್ಯಾಂಥೀನ್ ಹೈಡ್ರೋಕ್ಲೋರೈಡನ್ನು ೨·೫ ಗ್ರಾಂನಷ್ಟು ಭಾಗಮಾಡಿ ಕೊಡಬಹುದು.

ರೋಗದ ತಡೆಗಟ್ಟುವಿಕೆ

ದುಂಡು ಜಂತಿನ ರೋಗ ಎಲ್ಲ ಕಡೆ ಪ್ರಚಲಿತವಿದೆ. ಸಾಮಾನ್ಯವಾಗಿ ಈ ರೋಗ ಮಕ್ಕಳಲ್ಲಿ ಕಾಣಸಿಕ್ಕುತ್ತದೆ. ಅದಕ್ಕೆ ನೈರ್ಮಲ್ಯ ರಹಿತ ವಾತಾವರಣವೇ ಕಾರಣವಾಗಿದೆ. ವೈಯಕ್ತಿಕ ನೈರ್ಮಲ್ಯದತ್ತ ಆದ್ಯ ಗಮನ ಕೊಡಬೇಕು. ವಾಸಿಸುವ ಪ್ರದೇಶದ ಸುತ್ತಲಿನ ಪರಿಸರ ಚೊಕ್ಕಟವಾಗಿರುವಂತೆ ನೋಡಿಕೊಳ್ಳಬೇಕು. ಕಶ್ಮಲ, ಮಲವಿಸರ್ಜನೆ ಮನೆಯ ಸುತ್ತಮುತ್ತ ಜರುಗದಂತೆ ಮಾಡಬೇಕಲ್ಲದೆ ಅದಕ್ಕೆ ಯೋಗ್ಯ ಸ್ಥಳಗಳನ್ನು ಕಟ್ಟಬೇಕು. ಇದರಿಂದ ಆಹಾರ ಮಲಿನಗೊಳ್ಳುವುದು ಕಡಿಮೆಯಾಗುತ್ತದೆ.

ಮಕ್ಕಳು ಹೇಸಿಗೆಯ ಬಳಿ ಆಟವಾಡಿ ಅಲ್ಲಿನ ಕಶ್ಮಲ ತಮ್ಮ ಬೆರಳಿಗೆ, ಉಗುರಿಗೆ ಅಂಟಿಕೊಳ್ಳುವಂತೆ ಮಾಡಿಕೊಳ್ಳುವರು. ಬೆರಳನ್ನು ಬಾಯಿಗಿಟ್ಟಾಗ ಇಲ್ಲವೆ ಆಹಾರ ಪಾನೀಯದೊಳಗೆ ಕೈಯಿರಿಸಿದಾಗ ಜಂತಿನ ಮೊಟ್ಟೆಯು ಅದನ್ನು ಕಲುಷಿತಗೊಳಿಸಿ ದೇಹದೊಳಸೇರಲು ಯೋಗ್ಯ ಭೂಮಿಕೆ ಒದಗಿದಂತಾಗುವುದು. ಆದುದರಿಂದ ನಿರ್ಮಲ ವಾತಾವರಣದ ಅಗತ್ಯ ರೋಗದ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಮಹತ್ವದ ಸ್ಥಾನಗಳಿಸಿದೆ. ಈ ರೀತಿಯ ಕಲುಷಿತಗೊಳ್ಳುವಿಕೆ ಆ ಪ್ರದೇಶದಲ್ಲಿ ಬೆಳೆಯುವ ತರಕಾರಿಗೂ ಆಗುವುದರಿಂದ ತೊಳೆಯದ, ಹಸಿ ತರಕಾರಿ ಸೇವನೆಯನ್ನು ಮಾಡಬಾರದು. ಅದನ್ನು ಚೆನ್ನಾಗಿ ತೊಳೆದು ಉಪಯೋಗಿಸಬೇಕು : ಇಲ್ಲವೆ ಪೊಟ್ಯಾಸಿಯಂ ಪರ್ಮಾಂಗನೇಟ್ ನಂಜುರೋಧಕ (Antiseptic) ಹರಳನ್ನು ನೀರಿನಲ್ಲಿ ಹಾಕಿ, ಅದರಲ್ಲಿ ತರಕಾರಿಯನ್ನು ತೊಳೆಯಬೇಕು.

ರೋಗ ಲಕ್ಷಣಗಳನ್ನು ತೋರ್ಪಡಿಸುವ ಮಕ್ಕಳಲ್ಲಿ ಚಿಕಿತ್ಸೆಯನ್ನು ಕೈಕೊಂಡರೆ ಅವರ ಬೆಳವಣಿಗೆಯೂ ಚೆನ್ನಾಗಿ ಆಗುವುದು ಮತ್ತು ರೋಗವನ್ನು ಹರಡುವ ಶಕ್ತಿಯೂ ಕಡಿಮೆಯಾಗುವುದು.

ಕೊಕ್ಕೆಹುಳು ರೋಗ

ಬಹು ಪುರಾತನ ಕಾಲದಿಂದ ಜಗತ್ತಿನ ಅನೇಕ ಪ್ರದೇಶಗಳಲ್ಲಿ ಕೊಕ್ಕೆ ಹುಳುರೋಗ ಹರಡಿದೆ. ಸಮಭಾಜಕ ವೃತ್ತದ ಎರಡೂ ಬದಿಯ ರಾಷ್ಟ್ರಗಳಲ್ಲಿ ಈ ರೋಗ ವಿಶೇಷವಾಗಿ ಕಾಣಸಿಕ್ಕುತ್ತದೆ. ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳು, ಗಣಿ ಪ್ರದೇಶ ಮತ್ತು ಸುರಂಗಮಾರ್ಗಗಳಲ್ಲಿನ ಪ್ರದೇಶದಲ್ಲಿ ಕೆಲಸ ಮಾಡುವ, ಜೀವಿಸುವ ಜನರಲ್ಲಿ ಇದು ವಿಶೇಷ.

ಈ ರೋಗದ ಬೆಳವಣಿಗೆ ನಿಧಾನ. ಜೀವಾಣುಗಳಿಂದ ಉದ್ಭವವಾಗುವ ಕಾಲರಾ, ವಿಷಮಜ್ವರ, ಅತಿಸಾರಗಳಂತೆ ಈ ರೋಗವು ಏಕಾಏಕಿಯಾಗಿ ತೀವ್ರತೆರನಾದ ಗುಣಲಕ್ಷಣಗಳನ್ನು ಪ್ರಕಟಪಡಿಸಿ ಎಲ್ಲರ ಗಮನ ಸೆಳೆಯುವುದಿಲ್ಲ. ರೋಗವು ನಿಧಾನವಾಗಿ ಬೆಳವಣಿಗೆಯನ್ನು ಹೊಂದುತ್ತ, ಅದರ ಮುಖ್ಯ ಲಕ್ಷಣವಾದ ರಕ್ತಹೀನತೆಯನ್ನು ದೀರ್ಘಾವಧಿಯ ಅನಂತರ ತೋರ್ಪಡಿಸುವುದು. ಈ ಹುಳುವಿನ ಇರುವಿಕೆಯ ದೆಸೆಯಿಂದಾಗಿ ರಕ್ತದ ಹಾನಿಯಾಗುತ್ತಿದ್ದರೂ, ಅದರ ನಷ್ಟ ಕೂಡಲೇ ತಿಳಿದುಬರುವುದಿಲ್ಲ. ಮನುಷ್ಯನ ರಕ್ತವನ್ನು ಹೀರಿ ಪ್ರಾಣಕ್ಕೆ ಧಕ್ಕೆಯನ್ನು ತರಬಲ್ಲ ವಿಶಿಷ್ಟ ಗುಣ ಹೊಂದಿದ ಈ ಹುಳುವನ್ನು ಕೊಲೆಪಾತಕ ಹುಳುವೆಂದೂ ಕರೆದಿದ್ದಾರೆ.

ಪ್ರಾಚೀನ ಕಾಲದಲ್ಲಿ ಇದು ಕರುಳು ರೋಗವೆಂದು ಪರಿಗಣಿಸಲ್ಪಟ್ಟಿದ್ದಿತು. ಕೊಕ್ಕೆಹುಳು ಕರುಳಿನಲ್ಲಿ ಉಂಟು

ಮಾಡುವ ರಕ್ತದ ನಾಶದ ಫಲವಾಗಿ, ಅದು ಹೃದಯ-ರಕ್ತ ನಾಳಗಳ ಮೇಲೆ ಪ್ರಭಾವ ಬೀರುತ್ತದೆಂಬುದನ್ನು ಕಳೆದ ಶತಮಾನದಲ್ಲಿ ದೃಢಪಡಿಸಲಾಯಿತು.

ದೈಹಿಕ ರಚನೆ

ಕೊಕ್ಕೆಯಂತೆ ಬಾಗಿದ ಶರೀರವನ್ನು ಪಡೆದಿರುವುದರಿಂದ ಈ ಹುಳುಗಳಿಗೆ ಕೊಕ್ಕೆಹುಳು ಎಂಬ ಹೆಸರು ಬಂದಿದೆ. ಈ ಹುಳುಗಳು ಎರಡು ತೆರನಾಗಿವೆ: ಆಂಕೈಲೋಸ್ಟೊಮಾ ಡ್ಯುಯೊಡಿನೇಲ್ (Ankylostoma duodenale) ಮತ್ತು ನಿಕೇಟಾರ್ ಅಮೆರಿಕಾನಸ್ (Necator americanus). ಮೊದಲನೆಯ ಜಂತು ಉದ್ದವಾಗಿಯೂ, ದಪ್ಪಗಾಗಿಯೂ ಇದ್ದು ಅದರ ದೇಹ ಅರ್ಧ ಚಂದ್ರಾಕಾರವಾಗಿ ಬಾಗಿದೆ. ಅದರ ಮುಂಬದಿಯಲ್ಲಿನ ಬಾಯಲ್ಲಿ ಮೂರು ಜೊತೆ ಹಲ್ಲುಗಳಿವೆ. ಅವುಗಳ ಸಹಾಯದಿಂದ ಹುಳು ಕರುಳಿನ ಲೋಳ್ಪರೆಯನ್ನು ಕಚ್ಚಿ ಹಿಡಿಯಬಲ್ಲದು.

ಎರಡನೆಯ ತೆರನಾದ ಜಂತು ತೆಳ್ಳಗೂ, ಕುಳ್ಳಗೂ ಇದ್ದು ಉಬ್ಬು ತಗ್ಗು ತೋರಿಸುವಂತೆ ಅದರ ದೇಹ ಎರಡು ಬಾರಿ ಬಾಗಿದೆ. ಅದರ ಬಾಯಿ ತುದಿಯಲ್ಲಿ ಹಲ್ಲುಗಳ ಬದಲು ತಟ್ಟೆಯಾಕಾರದಲ್ಲಿ ಕತ್ತರಿಸುವ ಅಂಗಗಳಿವೆ. ಈ ಹುಳುಗಳು ಒಂದು ಸೆಂಟಿಮೀಟರ್ ಉದ್ದವಾಗಿದ್ದು ಬೆಳ್ಳಗೆ, ದಾರದ ತುಂಡಿನಂತಿವೆ. ಇವುಗಳಲ್ಲಿ ಗಂಡು-ಹೆಣ್ಣುಗಳೆಂಬ ಲಿಂಗಭೇದವಿದೆ (ಚಿತ್ರ ೩).




ಚಿತ್ರ ೩: ಹೆಣ್ಣು ಮತ್ತು ಗಂಡು ಕೊಕ್ಕೆಹುಳುಗಳು

ಜೀವನ ಚಿತ್ರ

ಈ ಜಂತು ದಿನಕ್ಕೆ ಒಂದು ಕೋಟಿ ಮೊಟ್ಟೆಗಳನ್ನು ಇಡಬಲ್ಲದು. ಈ ತೆರನಾಗಿ ವಿಪುಲ ಸಂಖ್ಯೆಯಲ್ಲಿ ಮೊಟ್ಟೆಗಳನ್ನಿಡುವುದರಿಂದ ಹುಳು ಹೊರ ಆವರಣದಲ್ಲಿ ನಾಶಗೊಳ್ಳದೆ, ಜೀವಿಸಿ ತನ್ನ ಜೀವನಯಾತ್ರೆಯನ್ನು ಮತ್ತು ವಂಶವನ್ನು ಉಳಿಸಿಕೊಳ್ಳಬಲ್ಲದುದಾಗಿದೆ.

ಮೊಟ್ಟೆಗಳು ಬಣ್ಣವಿಲ್ಲದ ತೆಳ್ಳನೆಯ ಹೊರಪೊರೆಯನ್ನು ಹೊಂದಿದ್ದು, ಒಳಗಡೆ ಹರಳಿನಂತೆ ನಾಲ್ಕೆಂಟು ಭ್ರೂಣಕಣ (Segments)ಗಳನ್ನು ಒಳಗೊಂಡಿರುತ್ತವೆ. ದುಂಡು ಜಂತಿನ ಮೊಟ್ಟೆಯಂತೆ ಅದು ಹಳದಿ ವರ್ಣವನ್ನು ಪಡೆದಿರುವುದಿಲ್ಲ ಇವು ಮಲದೊಡನೆ ಹೊರಬಂದು ನೆಲದಲ್ಲಿ ಸೇರ್ಪಡೆ ಹೊಂದುತ್ತವೆ. (ಚಿತ್ರ ೪).



ಚಿತ್ರ ೪ ಕೊಕ್ಕೆಹುಳುವಿನ ಮೊಟ್ಟೆ

ಗ್ರಾಮಾಂತರ ಪ್ರದೇಶಗಳಲ್ಲಿ, ಹೊಲ ಗದ್ದೆಯ ಬಳಿ, ಗ್ರಾಮದ ಹೊರವಲಯದ ಬಯಲಿನಲ್ಲಿ, ಗುಡಿಸಲು-ಮನೆಗಳ

ಸುತ್ತಮುತ್ತ, ನಡೆದಾಡುವ ಪ್ರದೇಶದಲ್ಲಿ, ಗಣಿ–ಸುರಂಗ ಮಾರ್ಗದ ಹಾದಿಯಲ್ಲಿ ಸ್ಥಳ ಪರಿಜ್ಞಾನವಿಲ್ಲದೆ ಮಲವಿಸರ್ಜನೆ ಮಾಡುವದರಿಂದ, ಅಲ್ಲಿನ ಮಣ್ಣಿನೊಡನೆ ಈ ಮೊಟ್ಟೆಗಳು ಸೇರ್ಪಡೆಯಾಗಿ ಬೆಳವಣಿಗೆ ಹೊಂದುತ್ತವೆ. ಆಮ್ಲಜನಕ, ಸಾಧಾರಣ ಮಟ್ಟದ ಉಷ್ಣತೆ, ತೇವ ಮತ್ತು ಕೊಳೆಯುತ್ತಿರುವ ಜೈವಿಕ ವಸ್ತುಗಳು ಮೊಟ್ಟೆಗಳ ಬೆಳವಣಿಗೆಗೆ ಯೋಗ್ಯ ಭೂಮಿಕೆಯನ್ನು ಒದಗಿಸುತ್ತವೆ. ಹೆಚ್ಚಿನ ಉಷ್ಣತೆ, ಒಣಗಿದ ನೆಲ ಮೊಟ್ಟೆಗಳ ಬೆಳವಣಿಗೆಗೆ ಯೋಗ್ಯ ಪರಿಸರವನ್ನು ಒದಗಿಸಿ ಕೊಡಲಾರವು.

ಮೊಟ್ಟೆಯು ನಾಲ್ಕಾರು ದಿನಗಳಲ್ಲಿ ಬೆಳೆದು ಅದರಿಂದ ಮರಿ ಹೊರಬರುತ್ತದೆ. ಪ್ರಾರಂಭಿಕ ದೆಶೆಯಲ್ಲಿ ಮರಿಯು ಅಲ್ಲಿನ ಆಹಾರ ಸೇವಿಸಿ, ಚಟುವಟಿಕೆಯನ್ನು ತೋರ್ಪಡಿಸದೆ, ಚಲಿಸದೆ ಬೆಳೆದು ದೊಡ್ಡದಾಗುವುದು. ಆ ಅವಧಿಯಲ್ಲಿ ಅದು ಎರಡು ಬಾರಿ ತನ್ನ ಹೊರಪೊರೆಯನ್ನು ಕಳಚುತ್ತದೆ. ಅನಂತರ ಮರಿಯು ದೊಡ್ಡದಾಗಿ ಚಲನೆಯನ್ನು ತೋರ್ಪಡಿಸುವುದು. ಅದು ತೇವದಿಂದ ಕೂಡಿದ ಮಣ್ಣಿನ ಮೇಲೆ, ಎಲೆ, ಹುಲ್ಲಿನ ಮೇಲೆ ತೆವಳುತ್ತ ಚಲಿಸುವುದು. ಅದಕ್ಕೆ ಹೊರ ಚರ್ಮದ ಪದರವೊಂದು (Cuticle) ವಿನಾಶಗೊಳ್ಳದಂತೆ ರಕ್ಷಣೆ ನೀಡುವುದು. ಆದರೂ ಅವು ಹೆಚ್ಚು ಉಷ್ಣತೆಯನ್ನು ತಾಳಲಾರವು.

ಮನುಷ್ಯ ಕಶ್ಮಲಗೊಂಡ ನೆಲದೊಡನೆ ಸಂಪರ್ಕ ಹೊಂದಿದಾಗ, ಚಟುವಟಿಕೆಯುಳ್ಳ ಈ ಮರಿಹುಳು (Filariform larva) ಚರ್ಮದ ಮೂಲಕ ದೇಹದೊಳ ಸೇರುತ್ತವೆ. ಪಾದ

ರಕ್ಷೆಯಿಲ್ಲದೆ ನಡೆದಾಡುವ ವ್ಯಕ್ತಿಯ ಪಾದದ ಮೂಲಕ ಇವು ಸಾಮಾನ್ಯವಾಗಿ ಸಂಪರ್ಕವನ್ನು ಪಡೆಯುತ್ತವೆ. ಅಲ್ಲಿನ ಚರ್ಮವನ್ನು ಕೊರೆದು, ತನ್ನ ರಕ್ಷಣಾ ಕವಚವನ್ನು ಕಳಚಿ ಚರ್ಮದ ಅಡಿಯ ಪ್ರದೇಶವನ್ನು ಸೇರುತ್ತದೆ. ಅಲ್ಲಿನ ಹಾಲ್ರಸನಾಳ (Lymphatics) ಅಥವಾ ಮಲಿನ ಕೇಶಿ (Venule)ಯ ಮೂಲಕ ಮಲಿನ ರಕ್ತನಾಳ (Vein) ವನ್ನು ತಲುಪಿ ರಕ್ತದೊಡನೆ ಹರಿದು ಹೋಗುತ್ತದೆ. ಅದ ರಿಂದಾಗಿ ಮರಿಹುಳು ಬಲಹೃದಯವನ್ನು ತಲುಪಿ, ಅಲ್ಲಿಂದ ಶ್ವಾಸ ರಕ್ತನಾಳ (Pulmonary artery)ದ ಮೂಲಕ ಪುಪ್ಫುಸ (Lung) ವನ್ನು ತಲುಪುತ್ತದೆ. ಅಲ್ಲಿನ ಲೋಮನಾಳ (Capillary)ದ ಮೂಲಕ ಮರಿಹುಳು ಹೊರಬಂದು ಗಾಳಿಗೂಡಿನೊಳಕ್ಕೆ (Alveoli) ನುಗ್ಗಿ ಬರುವುದು. ಅಲ್ಲಿಂದ ಅದು ಉಸಿರುನಾಳದ ಕವಲುಗಳ ಮೂಲಕ ಮೇಲೇರಿ ಕಿರುನಾಲಿಗೆಯನ್ನು ತಲುಪಿ, ಅಲ್ಲಿಂದ ಅದು ಅನ್ನನಾಳದೊಳಕ್ಕೆ ನುಂಗಲ್ಪಡುತ್ತದೆ. ಅದು ಜಠರ ಕೋಶದ (Stomach) ಮೂಲಕ ಸಣ್ಣ ಕರುಳನ್ನು ಸೇರಿ, ಅಲ್ಲಿ ಅದು ದೊಡ್ಡ ಹುಳುವಾಗಿ ಬೆಳೆಯುತ್ತದೆ. ಸಣ್ಣ ಕರುಳಿನ ದ್ವಿತೀಯ ಭಾಗವಾದ ಮುಂಗರುಳಿನಲ್ಲಿ ಇದರ ವಾಸ. ಸಣ್ಣ ಕರುಳಿನ ಆದಿ ಭಾಗವಾದ ದುರಾರ್ಗರುಳಿನಲ್ಲೂ ಇರಬಲ್ಲದು. ಮರಿಹುಳು ಚರ್ಮದೊಳಕ್ಕೆ ಸೇರಿದ ಐದು ವಾರಗಳ ಅನಂತರ ಹುಳು ಪ್ರೌಢಾ-ವಸ್ಥೆಯನ್ನು ಪಡೆದು ಮೊಟ್ಟೆಗಳನ್ನಿಡಬಲ್ಲ ಸಾಮರ್ಥ್ಯವನ್ನು ಪಡೆಯುತ್ತದೆ.

ದೇಹದ ಮೇಲೆ ಪ್ರಭಾವ

ಈ ಹುಳುಗಳು ಕರುಳಿನ ಲೋಳ್ಪರೆ (Mucous membrane) ಯನ್ನು ಕಚ್ಚಿ ಹಿಡಿಯುತ್ತವೆ. ಹುಳುಗಳ ಸಂಖ್ಯೆ ನೂರರಿಂದ ಸಾವಿರ, ಎರಡು ಸಾವಿರದ ವರೆಗೆ ಇರಬಹುದು. ಅಲ್ಲಿ ಅವು ರಕ್ತವನ್ನು ಹೀರುತ್ತವೆ. ಹೀರಿದ ರಕ್ತ ನಳಿಗೆಯಲ್ಲಿ ಹರಿದುಹೋದಂತೆ ಹೊರಹೋಗುತ್ತದೆ. ರಕ್ತಕಣಗಳು ಕೊಕ್ಕೆ ಹುಳುವಿನ ಜೀರ್ಣಾಂಗದಲ್ಲಿ ಯಾವ ಬದಲಾವಣೆಯೂ ಹೊಂದದೆ ಹೊರಕ್ಕೆ ತ್ಯಜಿಸಲ್ಪಡುತ್ತವೆ. ಹುಳುವು ಬರಿಯ ರಕ್ತರಸ (Plasma) ವನ್ನು ಮಾತ್ರ ಉಪಯೋಗಿಸಿಕೊಳ್ಳುವುದು (ಚಿತ್ರ ೫).

ಹುಳುವು ಕಾಲಕಾಲಕ್ಕೆ ಒಂದು ಸ್ಥಳ ಬಿಟ್ಟು ಮತ್ತೊಂದು ಸ್ಥಳವನ್ನು ತಲುಪಿ ಅದನ್ನು ಕಚ್ಚಿಹಿಡಿಯುತ್ತದೆ. ಅದರಿಂದಾಗಿ ಅದು ಮೊದಲು ಕಚ್ಚಿಹಿಡಿದಿದ್ದ ಸ್ಥಳದಿಂದ ರಕ್ತ ಕೆಲಕಾಲ ಒಸರುತ್ತದೆ. ಮೇಲಾಗಿ ಕೊಕ್ಕೆ ಹುಳುಗಳ ಬಾಯಿಯಲ್ಲಿನ ಗ್ರಂಥಿ (Gland) ಗಳಿಂದ ದ್ರವಿಸುವ ರಸ ರಕ್ತಕರಗೆರೋಧಕ (Anti-coagulant) ವಾಗಿ ಕಾರ್ಯ ನಿರ್ವಹಿಸಬಲ್ಲುದಾದುದರಿಂದ ರಕ್ತದ ಒಸರುವಿಕೆ ಹೆಚ್ಚು ಕಾಲ ಜರುಗಬಲ್ಲುದುದಾಗಿದೆ. ಈ ಹುಳುಗಳ ಇರುವಿಕೆಯಿಂದಾಗಿ ಮುಂಗರುಳಿನ (Jejunum) ಉರಿಯುಂಟಾಗುವುದರ ಫಲವಾಗಿ ಸೇವಿಸುವ ಆಹಾರದಲ್ಲಿರುವ ಕಬ್ಬಿಣದ ಹೀರಿಕೆ ಅಸಮರ್ಪಕವಾಗಿ

ಜರುಗುವುದು. ಹೆಚ್ಚು ಜನರು ನ್ಯೂನ ಆಹಾರ (Malnutrition) ದ ಸೇವನೆಯ ಫಲವಾಗಿ ಅದರ ಪರಿಣಾಮವನ್ನು ಅನು-



ಚಿತ್ರ ೫:
ಸಣ್ಣ ಕರುಳಿನ ಲೋಳ್ಪರೆಯನ್ನು ಕೊಕ್ಕೆಹುಳುಗಳು ಕಚ್ಚಿ ಹಿಡಿದಿರುವುದು. ಅಲ್ಲಲ್ಲಿ ರಕ್ತದ ಒಸರಿಕೆಯನ್ನು ಕಾಣಬಹುದು.

ಭವಿಸುತ್ತಿರುವವರಾದುದರಿಂದ, ಈ ತೆರನಾಗಿ ಉಂಟಾಗುವ ರಕ್ತದ ನಷ್ಟ ರೋಗಿಯ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವುದು

ಅವರಲ್ಲಿ ಕಬ್ಬಿಣದ ಸಂಗ್ರಹ ಕಡಿಮೆಯಾಗಿರುತ್ತದೆ. ರಕ್ತದ ನಷ್ಟದಿಂದ ಕಬ್ಬಿಣ ದೇಹದಿಂದ ವಿಸರ್ಜನೆಗೊಳ್ಳುತ್ತದೆ. ಆಹಾರದಲ್ಲಿ ಸಸಾರಜನಕ ಪದಾರ್ಥಗಳ (Proteins) ಕೊರತೆಯಿಂದಾಗಿ ರಕ್ತಕಣಗಳ ಸಿದ್ಧತೆಗೆ ಬೇಕಾದ ಅಮೈನೋ ಆಮ್ಲಗಳ ಪೂರೈಕೆ ಕಡಿಮೆಯಾಗುತ್ತದೆ. ಇದರಿಂದ ದೇಹದಲ್ಲಿ ಕೆಂಪು ರಕ್ತಗೋಲಕ (Red blood corpuscles) ಗಳ ತಯಾರಿಕೆ ತೀವ್ರವಾಗಿ ಕುಂಠಿತಗೊಳ್ಳುತ್ತದೆ.

ಒಂದು ಹುಳು ಲೋಳ್ಪರೆಯಲ್ಲಿ ಸೇರಿಕೊಂಡು ದಿನವೂ ೦·೧ ಮಿಲಿಲೀಟರ್ ರಕ್ತದ ನಷ್ಟಕ್ಕೆ ಕಾರಣವಾಗುತ್ತದೆ. ಒಬ್ಬನಲ್ಲಿ ಸಾವಿರ ಹುಳುಗಳು ಇರುವುದು ಆಶ್ಚರ್ಯವೇನಲ್ಲ. ಅದರಿಂದ ಆಗುವ ರಕ್ತದ ನಷ್ಟ ಕಲ್ಪನೆಗೂ ನಿಲುಕದುದು. ವಾಂತಿಯಲ್ಲಿ, ಕೆಮ್ಮಿನಲ್ಲಿ ಇಲ್ಲವೆ ಗಾಯಗಳಿಂದ, ಅಪಘಾತ ಗಳಿಂದ ಉಂಟಾಗುವ ರಕ್ತದ ನಾಶ ತೀವ್ರವಾಗಿ ಗೋಚರ ವಾಗುತ್ತದೆ. ಆದರೆ ಹುಳು ದಿನವೂ ಅತ್ಯಂತ ಕಡಿಮೆ ಪ್ರಮಾಣದಲ್ಲಿ ರಕ್ತವನ್ನು ನಷ್ಟಗೊಳಿಸುತ್ತ ಹೋಗುವುದು ಗೋಚರವಾಗುವುದಿಲ್ಲ. ದಿನಗಳೆದಂತೆ ಅದರ ಒಟ್ಟು ಪ್ರಮಾಣ ಜಾಸ್ತಿಯಾಗಿ ರಕ್ತಹೀನತೆಯ ಗುಣಲಕ್ಷಣಗಳು ದೇಹದಲ್ಲಿ ಗೋಚರವಾಗುತ್ತವೆ.

ರೋಗಲಕ್ಷಣಗಳು

ಮರಿಹುಳು ಚರ್ಮವನ್ನು ಕೊರೆಯುವ ಪ್ರದೇಶದಲ್ಲಿ ತುರಿಕೆ (Itch) ಯುಂಟಾಗಬಹುದು. ಆ ಪ್ರದೇಶದಲ್ಲಿ ಗುಳ್ಳೆಯೊಂದು ಉದ್ಭವಿಸಿ, ಕೀವುಗಟ್ಟಿ ಗಾಯವೂ ಆಗಬಲ್ಲದು. ಅದಕ್ಕೆ ನೆಲಕೆರೆತ (Ground itch) ಎಂಬ ಹೆಸರು ಬಂದಿದೆ. ಅನೇಕರಲ್ಲಿ ಈ ಸ್ಥಿತಿ ಗಮನಕ್ಕೆ ಬರುವದಿಲ್ಲ.

ಮರಿಹುಳುವಿನ ಬೆಳವಣಿಗೆಯ ಕಾಲದಲ್ಲಿ, ಅದು ಪುಪ್ಪುಸದ ಲೋಮನಾಳಗಳಿಂದ ಗಾಳಿಗೂಡನ್ನು ತಲುಪುವಾಗ ಆಗುವ ಧಕ್ಕೆಯಿಂದ ಪುಪ್ಪುಸದ ಉರಿ ಬಂದು ರಕ್ತದಿಂದ ಕೂಡಿದ ಕಫ, ಕೆಮ್ಮು, ಜ್ವರ ತೋರಿಬರಬಹುದು. ಆ ಕಾಲದಲ್ಲಿ ಎದೆ ಚಿತ್ರ ತೆಗೆದು ನೋಡಿದಾಗ ಅಲ್ಲಿ ತಾತ್ಕಾಲಿಕವಾಗಿ ಬಿಳಿಯ ಛಾಯೆ ಕಂಡುಬರುವುದು. ರಕ್ತದಲ್ಲಿ ಕೆಂದು ಕಣಗಳ (eosinophils) ಸಂಖ್ಯೆ ಹೆಚ್ಚುವರಿಗೊಂಡಿರುವುದು.

ರಕ್ತಹೀನತೆ ಈ ರೋಗದಲ್ಲಿ ತೋರಿಬರುವ ಪ್ರಮುಖ ಗುಣಲಕ್ಷಣ. ದೇಹದ ಎಲ್ಲ ಅಂಗಭಾಗಗಳು, ಅವಯವಗಳು ರಕ್ತಹೀನತೆಯ ಫಲವನ್ನು ಅನುಭವಿಸುತ್ತವೆ. ಚರ್ಮ, ಲೋಳ್ಪರೆ ಬಿಳಿಚಿಕೊಳ್ಳುತ್ತವೆ. ಕೈಕಾಲುಗಳು, ಮುಖ ಒಣಗಿ ಮಣ್ಣಿನ ಛಾಯೆಯನ್ನು ಹೊಂದುತ್ತವೆ. ಹೊಟ್ಟೆಯ ಗುಂಡಿಯಲ್ಲಿ ಅಸ್ಥಿರತೆ ತೋರಿಬರುತ್ತದೆ. ಬಾಯಿ ರುಚಿಯಲ್ಲಿ ಬದಲಾವಣೆ, ಆಹಾರದ ಅಪಚನ, ಸುಸ್ತು ತೋರಿಬರುತ್ತವೆ.

ದಿನೇ ದಿನೇ ಹೆಚ್ಚುತ್ತಿರುವ ಸುಸ್ತು, ರಕ್ತಹೀನತೆಯಿಂದ ಉಬ್ಬಸ, ಎದೆಬಡಿತ, ಕಿವಿಯಲ್ಲಿ ಶಬ್ದ, ದೃಷ್ಟಿಮಾಂದ್ಯ ಆಲಸ್ಯತನ, ಮುಖಬಾವು, ಕೈಕಾಲು ಊತ ತೋರಿಬರುತ್ತವೆ.

ಮಕ್ಕಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಉಗುರುಗಳು ಬೆಳ್ಳಗೂ, ತೆಳ್ಳಗೂ, ಆಗಿ ಮುರುಟಿ ಹಳ್ಳಗೊಳ್ಳುತ್ತವೆ. (Koilonychia) (ಚಿತ್ರ ೬). ಹೃದಯದ ಶ್ವಾಸ ಪ್ರದೇಶದಲ್ಲಿ (Pulmonary area) ಆಲಿಸಿದಾಗ ಆಕುಂಚನ (Systolic) ಮರ್ಮರ (murmur) ಕೇಳಿಬರುತ್ತದೆ. ನಾಡಿ ಬಡಿತ ತೀವ್ರಗೊಳ್ಳುತ್ತದೆ. ಕತ್ತಿನ ಮಲಿನ ರಕ್ತನಾಳಗಳನ್ನು ಆಲಿಸಿದಾಗ ಶಿರದ ಹೂಂಕಾರ (Venous hum) ಕೇಳಿಬರುವುದು. ಕಲಿಜ (Liver) ದೊಡ್ಡದಾಗುವುದು. ದೈಹಿಕ ಆರೋಗ್ಯ ಕುಂದಿ, ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತದೆ.

ಆಶ್‌ಫರ್ಡ್ ಮತ್ತು ಕಿಂಗ್‌ರು ಈ ರೋಗದ ಗುಣಲಕ್ಷಣಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ : ಕಡಿಮೆ ಮತ್ತು ಹೆಚ್ಚಿನ ತೀವ್ರತೆಯ ಲಕ್ಷಣಗಳು ಹಾಗೂ ಇವೆರಡರ ಮಧ್ಯಮ ಲಕ್ಷಣಗಳು.

ಕಡಿಮೆ ತೀವ್ರತೆಯ ಲಕ್ಷಣಗಳು : ಸ್ವಲ್ಪ ಮಟ್ಟಿಗೆ ಬಿಳಿಚಿಕೊಂಡಿರುವಿಕೆ, ಬೆವರಿನ ಇಳುವರಿ, ಆಹಾರದ ಮೇಲೆ ಹೆಚ್ಚಿನ ಬಯಕೆ, ಹೊಟ್ಟೆಯಲ್ಲಿ ಕಸಿವಿಸಿ, ಹೊಟ್ಟೆಯ ಗುಂಡಿಯಲ್ಲಿ ನೋವು, ಗಾಳಿಯಿಂದ ಹೊಟ್ಟೆ ಉಬ್ಬಿಕೊಂಡ ಭಾವನೆ, ಶ್ರಮದ ಅನಂತರ ಉಬ್ಬಸ, ಆಗಾಗ್ಗೆ ಎದೆ ಬಡಿತ ತೀವ್ರಗೊಳ್ಳುವಿಕೆ, ತಲೆ ಸುತ್ತು, ತಲೆನೋವು, ಯಾವುದಾದರೂ ಸಂಗತಿಗಳ ಮೇಲೆ ಗಮನವಿಲ್ಲದಿರುವಿಕೆ, ಬುದ್ಧಿಮಾಂದ್ಯ, ಸುಸ್ತು, ಆಲಸ್ಯತನ. ಇಂಥವರಲ್ಲಿನ ರಕ್ತವರ್ಣ (Haemoglobin) ನೂರಕ್ಕೆ ಆರವತ್ತು ಇಲ್ಲವೆ ಅದಕ್ಕಿಂತ ಹೆಚ್ಚಿರುತ್ತದೆ.

ಮಧ್ಯಮತೆರನಾದ ಲಕ್ಷಣಗಳು : ಗುಣಲಕ್ಷಣಗಳು ಹೆಚ್ಚು ಸ್ಫುಟಗೊಂಡಿರುತ್ತವೆ. ದೇಹ ಬಿಳಿಚಿಕೊಂಡಿರುತ್ತದೆ. ಲೋಳ್ಪರೆ ರಕ್ತಹೀನಗೊಳ್ಳುವುದು. ಚರ್ಮ ಒಣಗುವುದು, ಬೆವರುವುದು ನಿಲುಗಡೆಯಾಗುವುದು. ಹಸಿವೆ ಹೆಚ್ಚುಗೊಂಡು ಏನನ್ನಾದರೂ ತಿಂದೇನು ಎನ್ನುವರು. ಆಗಾಗ್ಗೆ ವಾಂತಿಯಾಗುವ ಭಾವನೆ ಮತ್ತು ವಾಂತಿ ಬರಬಹುದು. ನಾಲಿಗೆ ಮೃದುವಾಗಿ ಪೊರೆಗಟ್ಟಬಹುದು. ಹೊಟ್ಟೆಯ ಗುಂಡಿಯನ್ನು ಮುಟ್ಟಿದಾಗ ನೋವು ತೋರಿಬರುತ್ತದೆ. ಉಬ್ಬಸ ಮತ್ತು ಎದೆ ಬಡಿತ ಸಾಮಾನ್ಯವಾಗಿ ಗೋಚರಿಸುತ್ತದೆ. ನಾಡಿಯ ಬಡಿತ ತೀವ್ರಗೊಳ್ಳುವುದು. ಕೈ-ಕಾಲಿನಲ್ಲಿ ಶಕ್ತಿ ಕುಂದುವುದು, ವ್ಯಕ್ತಿಯು ರೋಗಿಷ್ಠ ಭಾವನೆ ಹೊಂದುತ್ತಾನೆ. ತಲೆತಿರುಗುವುದು, ಕಿವಿಯಲ್ಲಿ ಶಬ್ದವುಂಟಾಗುವುದು, ಬುದ್ಧಿಮಾಂದ್ಯ ಹೆಚ್ಚುವುದು, ಸ್ನಾಯುಗಳು ಮೃದುತ್ವ ಹೊಂದುವುವು, ರೋಗನಿರೋಧಕ ಶಕ್ತಿ ಕುಗ್ಗುವುದು. ಕೀಲಿನಲ್ಲಿ ನೋವು ತೋರಿಬರುವುದು, ಕೆಲಸಮಾಡುವ ಶಕ್ತಿ ಕುಂದುವುದು. ಅವರಲ್ಲಿ ರಕ್ತವರ್ಣ ನೂರಕ್ಕೆ ೩೦ ರಿಂದ ೬೦ರವರೆಗೆ ಇರಬಹುದು.

ತೀವ್ರತೆರನಾದ ಲಕ್ಷಣಗಳು: ರೋಗವು ತೀರ ಉಲ್ಬಣಗೊಂಡು ಸಾವು ಸನ್ನಿಹಿತವಾಗುವುದು. ದೇಹ ತುಂಬಾ ಬಿಳಿಚಿಕೊಂಡಿರುತ್ತದೆ. ಕಾಲಿನಲ್ಲಿ ಹದಡಿನ (Ankle) ಸುತ್ತ ನೀರು ಸಂಚಯಗೊಂಡು ಉಬ್ಬುವುದು. ವಾಂತಿಯ ಭಾವನೆ, ವಾಂತಿಭೇದಿ, ಮಲಬದ್ಧತೆ, ತೀವ್ರತೆರನಾದ ಉಬ್ಬಸ ತೋರಿಬರುತ್ತದೆ.

ರೋಗಿಯು ಉಬ್ಬಸವಿಲ್ಲದೆ ಹೆಜ್ಜೆಯಿಡಲು ಅಸಮರ್ಥನಾಗುತ್ತಾನೆ. ಎದೆ ಬಡಿತ ತೀವ್ರಗೊಳ್ಳುವುದು, ಅಲ್ಲಿ ನೋವೂ ತೋರಿಬರುವುದು. ನಾಡಿಯು ಬಡಿತ ತೀವ್ರಗತಿ ಹೊಂದುವುದು, ಕುತ್ತಿಗೆ ಶಿರಗಳು ಅಲೆಗಳನ್ನು ಎದ್ದು ತೋರಿಸುವುವು. ತಲೆ ತಿರುಗು, ತಲೆನೋವು, ನಿದ್ರಾಹೀನತೆ, ತೋರಿಬರುತ್ತವೆ. ಮಂಡಿ ಪರಾವೃತ್ತ (Patella reflex) ಮಾಯವಾಗುವುದು. ನಪುಂಸಕತ್ವ (Impotency) ಮುಟ್ಟಿನ ನಿಲುಗಡೆ (Amenorrhoea) ತೋರಿಬರಬಹುದು. ಬುದ್ಧಿಮಾಂದ್ಯವಾಗುತ್ತದೆ. ಮಾನಸಿಕ ಪ್ರತಿಕ್ರಿಯೆಗಳು ತುಂಬಾ ನಿಧಾನವಾಗುತ್ತವೆ. ನೋಡಲು ಮಂಕು ಹಿಡಿದವನಂತೆ ತೋರುವನು. ತುಂಬಾ ಸುಸ್ತು, ಬಲಹೀನತೆ.

ರೋಗ ನಿದಾನ

ರಕ್ತದಲ್ಲಿ ಕೆಂಪು ರಕ್ತಕಣಗಳ ಸಂಖ್ಯೆ ಕಡಿಮೆಯಾಗಿ ಅವುಗಳ ಗಾತ್ರ ಕಿರಿದಾಗಿರುತ್ತದೆ. ಅವುಗಳಲ್ಲಿನ ರಕ್ತವರ್ಣ ತೀರ ಕಡಿಮೆಯಿರುತ್ತದೆ. ರಕ್ತಕಣಗಳು ಚಿಕ್ಕವೂ, ರಕ್ತವರ್ಣಹೀನವೂ (Microcyte, hypochromic anaemia) ಆಗಿರುವುದು ಈ ರೋಗದ ಪ್ರಮುಖ ಗುಣಲಕ್ಷಣ. ರಕ್ತವರ್ಣ ಶತಾಂಶ (Percentage) ತೀರ ಕಡಿಮೆಯಿರುತ್ತದೆ.

ರಕ್ತಹೀನತೆಯು ರೋಗಿಯಲ್ಲಿ ರಕ್ತಸ್ರಾವದಿಂದ ಉಂಟಾಗಿರಬಹುದು. ಇಲ್ಲವೆ ನ್ಯೂನ ಆಹಾರ ಸೇವನೆಯಿಂದ ಬಂದಿರಬಹುದು. ಅದು ಕೊಕ್ಕೆ ಹುಳುವಿನಿಂದ ಉದ್ಭವವಾಗಿರುವು



ಚಿತ್ರ ೬

ರಕ್ತಹೀನತೆಯಿಂದ ಮುರುಟಿ ಹಳ್ಳಗೊಂಡ ಉಗುರು

ದನ್ನು ಮಲಪರೀಕ್ಷೆ (Stool examination) ಯಿಂದ ದೃಢ ಪಡಿಸಿಕೊಳ್ಳಬೇಕು. ಮಲದಲ್ಲಿ ಈ ಹುಳುವಿನ ಮೊಟ್ಟೆಗಳು ವಿಪುಲ ಸಂಖ್ಯೆಯಲ್ಲಿ ಗೋಚರಿಸುತ್ತವೆ. ಒಂದು ಗಾಜಿನ ಹಲಗೆಯ ಮೇಲೆ ಮಲ ಹರಡಿ, ಅದನ್ನು ಸೂಕ್ಷ್ಮದರ್ಶಕದ (Microscope) ಮೂಲಕ ನೋಡಿದಾಗ ಕೊಕ್ಕೆ ಹುಳುವಿನ ಮೊಟ್ಟೆಗಳು ಗೋಚರವಾಗುತ್ತವೆ. ಅವುಗಳು ರೋಗದ ಕಾರಣವನ್ನು ದೃಢಪಡಿಸುತ್ತವೆ. ಒಂದು ಗ್ರಾಂ ಮಲದಲ್ಲಿನ ಮೊಟ್ಟೆಗಳ ಸಂಖ್ಯೆಯನ್ನು ಕಂಡುಹಿಡಿದು ಕರುಳಿನಲ್ಲಿ ಇರ ಬಹುದಾದ ಹುಳುಗಳ ಹೊರೆಯನ್ನು ನಿರ್ಧರಿಸಬಹುದು.

ರೋಗಚಿಕಿತ್ಸೆ

ರೋಗಚಿಕಿತ್ಸೆಯನ್ನು ಎರಡು ಭಾಗಗಳಾಗಿ ವಿಂಗಡಿಸ ಬಹುದು : ರಕ್ತಹೀನತೆಯ ಚಿಕಿತ್ಸೆ ಮತ್ತು ಕರುಳ ಹುಳು ಚಿಕಿತ್ಸೆ. ಇವೆರಡೂ ಒಂದಕ್ಕೊಂದು ಪೂರಕವಾಗಿವೆ. ರಕ್ತ ಹೀನತೆ ತೀವ್ರವಿದ್ದಾಗ ಮೊದಲು ಕಬ್ಬಿಣದ ಅಂಶವನ್ನು ಕೊಟ್ಟು ರಕ್ತವೃದ್ಧಿ ಮಾಡಿಕೊಳ್ಳಬೇಕಾಗುವುದು, ಇಲ್ಲವೆ ರಕ್ತ ದಾನವನ್ನೇ ಕೊಡಬೇಕಾಗುವುದು. ಈಚೆಗೆ ಬಂದಿರುವ ಹೊಸ ಔಷಧಗಳ ಫಲವಾಗಿ ಹುಳುವಿನ ವಿಸರ್ಜನೆಯನ್ನು ತೀವ್ರ ರಕ್ತ ಹೀನತೆಯಿದ್ದಾಗಲೂ ಕೈಕೊಳ್ಳಬಹುದಾಗಿದೆ.

ಬೆಫೆನಿಯಂ ಹೈಡ್ರಾಕ್ಸಿ ನಾಪ್ತಯೋಟ್ ಹುಳುಗಳ ವಿರುದ್ಧ ಒಳ್ಳೆಯ ಪರಿಣಾಮಕಾರಿ ಔಷಧಿಯಾಗಿದೆ. ಈ ಔಷ ಧಿಯು ಸಾರ್ವತ್ರಿಕ ಉಪಯೋಗಕ್ಕೆ ಅರ್ಹವಾಗಿದೆ. ೨.೫

ಗ್ರಾಮ್ ಮೂಲ ವಸ್ತುವಿರುವ ಈ ಹಳದಿ ಪುಡಿಯನ್ನು ಐದು ಗ್ರಾಮ್‌ನಷ್ಟು ರಾತ್ರಿ ಇಲ್ಲವೆ ಬೆಳಗಿನ ವೇಳೆ ಕೊಟ್ಟರೆ ಸಾಕು. ಮಕ್ಕಳಿಗೆ ಆ ಪ್ರಮಾಣದ ಅರ್ಧದಷ್ಟು ಸಾಕು. ಒಮ್ಮೆ ಇದನ್ನು ಸೇವಿಸಿದರೆ ಕರುಳಿನಲ್ಲಿ ಜೀವಂತವಿರುವ ಹುಳುಗಳ ಸಂಖ್ಯೆ ಪರಿಣಾಮಕಾರಿಯಾಗಿ ಕಡಿಮೆಯಾಗುತ್ತದೆ. ಅದನ್ನು ಪುನರಪಿ ಎರಡು ದಿನ ಕೊಟ್ಟರೆ ಹುಳುಗಳು ಸಂಪೂರ್ಣವಾಗಿ ವಿಸರ್ಜನೆ ಹೊಂದುತ್ತವೆ. ಈ ಕರುಳು ರೋಧಕ ದೇಹದ ಮೇಲೆ ಯಾವ ವಿಪರೀತ ಪ್ರತಿಕ್ರಿಯೆಯನ್ನೂ ತೋರಿಸುವುದಿಲ್ಲ. ಇದರ ಸೇವನೆಯಿಂದ ಕೆಲ ಬಾರಿ ವಾಂತಿಯುಂಟಾಗಬಹುದಾದ ಭೀತಿಯಿರುವುದರಿಂದ, ಅದನ್ನು ಸಕ್ಕರೆಯೊಡನೆ ಸೇರಿಸಿ ತೆಗೆದುಕೊಳ್ಳುವುದು ಉತ್ತಮ. ಕರುಳಿನಲ್ಲಿ ಇತರ ಜಂತುಗಳಿದ್ದಾಗ ಮತ್ತು ರಕ್ತಹೀನತೆಯ ತೀವ್ರ ಗುಣಲಕ್ಷಣಗಳಿದ್ದಾಗ ಸಹ ಈ ಔಷಧಿಯನ್ನು ಕೊಡಬಹುದು.

ಆರ್ಥಿಕ ದೃಷ್ಟಿಯಿಂದ ಪರಿಗಣಿಸಿದರೆ ಬೆಫೆನಿಯಂ ಬೆಲೆ ಹೆಚ್ಚು. ಸುಲಭ ಬೆಲೆಯ ಟೆಟ್ರಾಕ್ಲೋರ್ ಇಥಲೀನ್‌ನ್ನು ಒಂದು ಮಿಲಿಲೀಟರ್ ಔಷಧಿ ಕೋಶದಲ್ಲಿ ಇಲ್ಲವೆ ಒಂದು ಚಮಚೆ ಸಕ್ಕರೆ ನೀರಿನಲ್ಲಿ ಬೆರೆಸಿ ಬೆಳಿಗ್ಗೆ ಬರೀ ಹೊಟ್ಟೆಯಲ್ಲಿ ಕೊಡಬಹುದು. ಒಬ್ಬ ವ್ಯಕ್ತಿಗೆ ಮೂರು ಮಿಲಿಲೀಟರ್ ಔಷಧ ಸಾಕು. ಕರುಳಿನಲ್ಲಿ ಜಂತು ಹುಳು ಇದ್ದಾಗ ಮತ್ತು ತೀವ್ರ ರಕ್ತಹೀನತೆಯಿದ್ದಾಗ ಈ ಔಷಧಿಯನ್ನು ನೇರವಾಗಿ ಕೊಡಲು ಬರುವುದಿಲ್ಲ. ಜಂತು ಹುಳುಗಳಿದ್ದಾಗ ಅದನ್ನು ಪಿಪರ್ಜಿನ್ ಕರುಳು ಹುಳು ರೋಧಕದಿಂದ ವಿಸರ್ಜನೆಗೊಳಿಸಿ

ಈ ಔಷಧಿಯನ್ನು ಕೊಡಬೇಕು. ಹಾಗೆ ಮಾಡದೆ ನೇರವಾಗಿ ಈ ಔಷಧಿಯನ್ನು ಕೊಟ್ಟರೆ ಕರುಳಿನಲ್ಲಿ ಉರಿಯುಂಟಾಗಿ ಜಂತು ಹುಳುಗಳು ಚಲಿಸಿ ಕರುಳಿನಲ್ಲಿ ತಡೆಯನ್ನುಂಟು ಮಾಡುವ ಸಂಭವವಿದೆ. ರಕ್ತಕೊರತೆಯನ್ನು ಕಬ್ಬಿಣದ ಔಷಧಿ ಸೇವಿಸಿ ದೂರಪಡಿಸಿಕೊಳ್ಳಬೇಕು.

ಕರುಳು ಹುಳುಗಳನ್ನು ಸಾರ್ವತ್ರಿಕವಾಗಿ ಅನೇಕರಲ್ಲಿ ನಾಶಪಡಿಸಬೇಕಾದರೆ ಸುಲಭ ಬೆಲೆಯ ಟೆಟ್ರಾಕ್ಲೋರ್ ಇಥ ಲೀನ್ ೩ ಮಿಲಿಲೀಟರ್, ಚಿನೋಪೊಡಿಯಂ ಎಣ್ಣೆ ಅರ್ಧ ಮಿಲಿಲೀಟರ್‌ನ್ನು ಔಷಧಕೋಶ (Capsule) ದಲ್ಲಿ ಸೇರಿಸಿ ಬೆಳಿಗ್ಗೆ ಕೊಡಬೇಕು. ಅನಂತರ ಮ್ಯಾಗ್ನೀಸಿಯಂ ಸಲ್ಫೇಟ್ ವಿರೇಚಕವನ್ನು ಕೊಟ್ಟರೆ ಹುಳುಗಳು ವಿಸರ್ಜನೆಹೊಂದುತ್ತವೆ.

ರಕ್ತವೃದ್ಧಿಗೆ ಫೆರಸ್ ಸಲ್ಫೇಟ್ ೨೦೦ ಮಿ. ಗ್ರಾಂ ಗುಳಿಗೆಗಳನ್ನು ದಿನವೂ ಮೂರುಬಾರಿ ಮೂರು ತಿಂಗಳು ಸೇವಿಸಬೇಕು. ಅದರಿಂದ ರಕ್ತವರ್ಣ ಮಿಗಿಲಾಗುವುದು. ಅದರ ಸೇವನೆ ದೇಹದಲ್ಲಿ ವಿಪರೀತ ಪ್ರತಿಕ್ರಿಯೆಯನ್ನು ಉಂಟು ಮಾಡಿದರೆ ಕಬ್ಬಿಣವನ್ನು ಚುಚ್ಚುಮದ್ದಿನ ರೂಪದಲ್ಲಿ—ಸ್ಯಾಕರೇಟೆಡ್ ಐರನ್ ಆಕ್ಸೈಡ್ ಅಥವಾ ಐರನ್ ಸಾರ್ಬಿಟಾಲ್ ಸಿಟ್ರಿಕ್ ಆಸಿಡ್ ಕಾಂಪ್ಲೆಕ್ಸ್—ಕೊಟ್ಟು ರಕ್ತವರ್ಣದ ವೃದ್ಧಿಗೆ ಚಾಲನೆ ನೀಡಬಹುದು. ೨೫ ಮಿ. ಗ್ರಾಂ ಕಬ್ಬಿಣ ಒಂದು ಶತಾಂಶ ರಕ್ತವರ್ಣವನ್ನು ಹೆಚ್ಚುವರಿಗೊಳಿಸುವುದು.

ರೋಗನಿರೋಧಕ ಕ್ರಮಗಳು

ರೋಗದ ಪ್ರಸರಣದಲ್ಲಿ ಮೂರು ಮುಖ್ಯ ಅಂಶಗಳು ಕಾರಣೀಭೂತವಾಗಿವೆ. ಮೊಟ್ಟೆಗಳ ಬೆಳವಣಿಗೆಗೆ ಯೋಗ್ಯ ಪರಿಸರ; ಕೊಕ್ಕೆಹುಳು ರೋಗವನ್ನು ಹೊಂದಿದ ವ್ಯಕ್ತಿಗಳು ಮತ್ತು ಆ ಸ್ಥಳದಲ್ಲಿ ನಡೆದಾಡುವ ಜನಗಳು.

ಈ ಹುಳುಗಳ ಮೊಟ್ಟೆಗಳ ಬೆಳವಣಿಗೆಗೆ ಉಷ್ಣತೆ, ತೇವ ದಿಂದ ಕೂಡಿದ ನೆಲ ಮತ್ತು ಆಮ್ಲಜನಕ ಬೇಕು. ೨೫ ರಿಂದ ೩೦ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯು ಮರಿಯ ಬೆಳವಣಿಗೆಗೆ ಸಹಾಯಕವಾಗುವುದು. ತೀರ ಕಡಿಮೆ ಉಷ್ಣತೆ ಮರಿಹುಳು ವಿನ ಬೆಳವಣಿಗೆಗೆ ಸಹಕಾರಿಯಲ್ಲ. ತೀರ ಹೆಚ್ಚಿನ ಉಷ್ಣತೆಯು ಮಲದಲ್ಲಿನ ಜೈವಿಕ ಪದಾರ್ಥಗಳನ್ನು ತೀವ್ರವಾಗಿ ನಾಶ ಗೊಳಿಸುವುದರಿಂದ ಮರಿಹುಳುವಿನ ಬೆಳವಣಿಗೆಗೆ ಮಾರಕ-ವಾಗುತ್ತದೆ. ಬಹುಶಃ ಇದೇ ಕಾರಣದಿಂದಲೇ ತೀರ ಹೆಚ್ಚಿನ ಉಷ್ಣತೆಯಿರುವ ಗುಲಬರ್ಗಾ ಪ್ರದೇಶದಲ್ಲಿ ಈ ರೋಗವು ಕಂಡುಬರುವುದಿಲ್ಲ. ರಕ್ತಹೀನತೆಗೆ ಕರುಳುಹುಳು ಅಲ್ಲಿ ಕಾರಣೀಭೂತವಾಗಿಲ್ಲ. ಆದರೆ ಹುಬ್ಬಳ್ಳಿ, ಮಂಗಳೂರು, ಮೈಸೂರು, ಬೆಂಗಳೂರು ಕಡೆ ಕರುಳು ಹುಳುವಿನ ಬೆಳವಣಿಗೆ ವಿಶೇಷವಾಗಿ ಕಂಡುಬರುತ್ತದೆ. ಅಲ್ಲಿ ಜನರ ರಕ್ತಹೀನತೆಗೆ ಕೊಕ್ಕೆಹುಳು ಪ್ರಮುಖ ಕಾರಣವಾಗಿದೆ. ದಕ್ಷಿಣ ಭಾರತದ ಪ್ರದೇಶದಲ್ಲಿ ನಿಕೇಟಾರ್ ಅಮೆರಿಕಾನಸ್ ಕೊಕ್ಕೆಹುಳು ವಿಶೇಷ ವಾಗಿ ಕಂಡುಬರುತ್ತದೆ.

ಕೊಕ್ಕೆಹುಳು ಮೊಟ್ಟೆಗಳು ಮತ್ತು ಅದರ ಮರಿಹುಳು ಹೆಚ್ಚು ಶಾಖವನ್ನು, ಒಣಹವೆಯನ್ನು ತಡೆಯಲಾರವು. ನೆಲ ತೇವದಿಂದ ಕೂಡಿರಬೇಕು. ಮಳೆ ಹೆಚ್ಚು ಬರುತ್ತಿದ್ದರೆ ಅವು ಭೂಮಿಯ ಮೇಲ್ಪದರನ್ನೂ ತೇವದಿಂದ ಕೂಡಿರುವಂತೆ ಮಾಡುವುದು. ಅದು ಮೊಟ್ಟೆಗಳನ್ನೂ ನಾಶಗೊಳಿಸದೆ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಹಸೀ ನೆಲ, ಅಲ್ಲಲ್ಲಿ ಹಸಿರು ಹುಲ್ಲು ಮರಿಯ ಬೆಳವಣಿಗೆಯನ್ನು ತೀವ್ರಗೊಳಿಸುವುದು.

ಕೊಕ್ಕೆಹುಳು ರೋಗವನ್ನು ಹೊಂದಿದ ವ್ಯಕ್ತಿ ನೆಲವನ್ನು ಕಶ್ಮಲಗೊಳಿಸುವುದರಿಂದ ಅಲ್ಲಿ ಮೊಟ್ಟೆಗಳು ಸೇರ್ಪಡೆ ಹೊಂದಿ ಬೆಳೆಯುತ್ತವೆ. ಹೊಲಗದ್ದೆಗಳು, ಗಣಿ, ಪ್ಲಾಂಟೇಶನ್, ಸುರಂಗ ಮಾರ್ಗಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಅಲ್ಲಲ್ಲಿ ಮಲವಿಸರ್ಜಿಸಿದ ನೆಲವನ್ನೂ ತುಳಿದಾಡುವ ಪ್ರಮೇಯಗಳು ವಿಪುಲವಾಗಿರುವುದರಿಂದ ಈ ರೋಗಕ್ಕೆ ಸುಲಭವಾಗಿ ಬಲಿಯಾಗುತ್ತಾರೆ.

ಈ ರೋಗದ ನಿವಾರಣೆಯಲ್ಲಿ ರೋಗಿಗಳ ಚಿಕಿತ್ಸೆಯು ಬಹು ಮುಖ್ಯವಾದುದು. ಒಂದು ಸಮಾಜ ತನ್ನ ನೆಲವನ್ನು ಕಶ್ಮಲಗೊಳಿಸುವ ಪ್ರಮಾಣವನ್ನನುಸರಿಸಿ ಆ ರೋಗವನ್ನು ಮರಳಿ ಪಡೆಯುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕರು ಈ ರೋಗವನ್ನು ಹೊಂದಿರಬಹುದಾದುದರಿಂದ ಸಾಮೂಹಿಕ ಚಿಕಿತ್ಸೆಯನ್ನು ಕೈಕೊಳ್ಳಬೇಕು. ಎಲ್ಲರಿಗೂ ಟೆಟ್ರಾಕ್ಲೋರ್ ಇಥಲೀನ್ ಕರುಳುರೋಧಕವನ್ನು, ಮ್ಯಾಗ್ನೀ-

ಸಿಯಂ ಸಲ್ಫೇಟ್ ವಿರೇಚಕವನ್ನು ಕೊಟ್ಟು ಕರುಳು ಹುಳು ಗಳನ್ನು ನಾಶಪಡಿಸಬಹುದು.

ಮೊಟ್ಟೆಗಳ ಬೆಳವಣಿಗೆಯ ತಡೆಗಟ್ಟುವಿಕೆಯಲ್ಲಿ ಜನರು ಇರುವ ಪರಿಸರದಲ್ಲಿನ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದೇ ಮುಖ್ಯವಾದುದು. ಮನೆಯ ಸುತ್ತಮುತ್ತ, ನಡೆದಾಡುವ ಸ್ಥಳಗಳಲ್ಲಿ ಮಲವಿಸರ್ಜನೆ ಮಾಡುವುದನ್ನು ತಪ್ಪಿಸಲು ನೈರ್ಮಲ್ಯದಿಂದ ಕೂಡಿದ ಪಾಯಿಖಾನೆಗಳನ್ನು ಕಟ್ಟಬೇಕಾದುದು ಆದ್ಯ ಕರ್ತವ್ಯವಾಗಿದೆ. ರೋಗದ ಹರಡುವಿಕೆ ಮತ್ತು ಅದರ ವೃದ್ಧಿಗೆ ಜನರಲ್ಲಿನ ಅಜ್ಞಾನವೇ ಹೆಚ್ಚು ಕಾರಣವಾಗಿದೆ. ಮೊದಲೇ ಕಶ್ಮಲಗೊಂಡ ನೆಲದ ಮೇಲೆ ಮಲವಿಸರ್ಜನೆ ಮಾಡುತ್ತ ಕುಳಿತುಕೊಳ್ಳುವುದು ಮರಿ ಹುಳುಗಳು ಚರ್ಮದೊಳ ಸೇರಲು ಅನುವು ಮಾಡಿಕೊಡುತ್ತದೆ.

ಬರಿಗಾಲಿನಲ್ಲಿ ಓಡಾಡುವುದನ್ನು ತಪ್ಪಿಸಿ ಪಾದರಕ್ಷೆಗಳನ್ನು ಉಪಯೋಗಿಸಿದರೆ ಈ ರೋಗವನ್ನು ತೀವ್ರವಾಗಿ ಹಿಡಿತದಲ್ಲಿ ತರಲು ಸಾಧ್ಯವಾಗುವುದು. ಹೊಲಗದ್ದೆಗಳಲ್ಲಿ, ಪ್ಲಾಂಟೇಶನ್ ಮತ್ತು ಗಣಿಗಳಲ್ಲಿ ಕೆಲಸ ಮಾಡುವವರು ಪಾದರಕ್ಷೆಗಳನ್ನು ಉಪಯೋಗಿಸುವುದು ತುಂಬಾ ಅಗತ್ಯ.


ದಾರದ ಹುಳು ರೋಗ

ಜಗತ್ತಿನ ಎಲ್ಲೆಡೆ ಪ್ರಚಲಿತವಿರುವ ದಾರದ ಹುಳು ಅಥವಾ ಸೂಜಿಹುಳು (Pin worm) ಮಕ್ಕಳ ಕರುಳಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಎಂಟೆರೋಬಿಯಸ್ ವರ್ಮಿಕ್ಯುಲಾ-ರಿಸ್ ಎಂಬ ಹೆಸರು (Enterobius Vermicularis) ಈ ಹುಳುವಿಗಿದೆ.

ದೇಹ ರಚನೆ ಮತ್ತು ಜೀವನಕ್ರಮ

ಬಿಳಿದಾರದಂತಿರುವ ಈ ಹುಳು ಚಲನಶಕ್ತಿಯನ್ನು ಪಡೆದಿದೆ. ಅವುಗಳಲ್ಲಿ ಹೆಣ್ಣು-ಗಂಡೆಂಬ ಲಿಂಗ ಭೇದವಿದೆ. ಗಂಡು ಹುಳುವು ಕಾಲು ಸೆಂಟಿಮೀಟರ್ ಉದ್ದನಾಗಿದ್ದು, ಸುರಳಿಯಂತೆ ಸುತ್ತಿದ ದುಂಡನೆಯ ತುದಿಯನ್ನು ಹೊಂದಿದೆ. ಹೆಣ್ಣು ಒಂದು ಸೆಂಟಿಮೀಟರ್ ಉದ್ದನಾಗಿದ್ದು ಚೂಪಾದ ತುದಿಯನ್ನು ಪಡೆದಿದೆ. (ಚಿತ್ರ ೭).

ಈ ಹುಳುವು ಮೂಗರುಳು (Ileum), ದೊಡ್ಡ ಕರುಳಿನ ಆದಿಭಾಗ ಮತ್ತು ಏರುವ ದೊಡ್ಡ ಕರುಳಿನಲ್ಲಿ ವಾಸ ಹೊಂದಿರುತ್ತದೆ. ಹೆಣ್ಣು ಗರ್ಭ ತಳೆದ ನಂತರ ಗಂಡು ಹುಳುವು ಸತ್ತು ಹೋಗುತ್ತದೆ. ಬಸಿರಾದ ಹೆಣ್ಣು ಹುಳು ರಾತ್ರಿಯ ವೇಳೆಯಲ್ಲಿ ದೊಡ್ಡ ಕರುಳಿನ ಮೂಲಕ, ಗುದದ್ವಾರದ (Anus) ಕಡೆ



ಚಿತ್ರ ೭ : ಗಂಡು ಮತ್ತು ಹೆಣ್ಣು ದಾರದ ಹುಳುಗಳು

ಚಲಿಸಿ ಹೋಗಿ ಹೊರಬಂದು ಅಲ್ಲಿ ಸತ್ತು ಹೋಗುತ್ತದೆ. ಅದರಿಂದ ಮೊಟ್ಟೆಗಳು ಹೊರಬಂದು ಗುದದ್ವಾರದ ಸುತ್ತಲಿನ ಪ್ರದೇಶದ ಚರ್ಮಕ್ಕೆ ಅಂಟಿಕೊಳ್ಳುತ್ತವೆ. ಈ ಮೊಟ್ಟೆಗಳ ಬೆಳವಣಿಗೆಗೆ ಮತ್ತೊಬ್ಬ ವ್ಯಕ್ತಿಯೂ ಅಗತ್ಯವಿಲ್ಲ; ಹೊರ ಆವ ರಣದ ಅಗತ್ಯವೂ ಇಲ್ಲ.

ಚರ್ಮಕ್ಕೆ ಅಂಟಿಕೊಂಡ ಮೊಟ್ಟೆಗಳಲ್ಲಿನ ಭ್ರೂಣ ಶೀಘ್ರ ವಾಗಿ ಬೆಳವಣಿಗೆ ಹೊಂದಿ, ಅದರೊಳಗೆ ಚಿಕ್ಕ ಮರಿಯು ರೂಪು ಗೊಳ್ಳುತ್ತದೆ. ಮಕ್ಕಳು ಆ ಪ್ರದೇಶವನ್ನು ಕೆರೆದಾಗ, ಉಗುರು ಗಳಿಗೆ, ಕೈಬೆರಳುಗಳಿಗೆ ಆ ಮೊಟ್ಟೆಗಳು ಅಂಟಿಕೊಳ್ಳುತ್ತವೆ. ಈ ಮೊಟ್ಟೆಗಳು ಮಲಗಿದ ಹಾಸಿಗೆಯ ಬಟ್ಟೆಗಳಿಗೆ ಅಂಟಿ ಕೊಂಡು ಬೇರೆ ಮಕ್ಕಳೂ ಮೊಟ್ಟೆಗಳನ್ನು ಸ್ಪರ್ಶಿಸುವ ಪ್ರಮೇಯ ವಿಪುಲವಾಗಿದೆ. ಮಲಿನಗೊಂಡ ಬೆರಳನ್ನು ಬಾಯಿ ಗಿಟ್ಟುಕೊಂಡಾಗ ಇಲ್ಲವೆ ಅದರಿಂದ ತಿನ್ನುವ ಆಹಾರವನ್ನು ಮಲಿನಗೊಳಿಸಿದಾಗ, ಬೆಳೆದ ಮೊಟ್ಟೆಯು ದೇಹದೊಳಕ್ಕೆ ನುಂಗಲ್ಪಡುವುದು.

ಸಣ್ಣ ಕರುಳಿನಲ್ಲಿ ಮರಿ ಹುಳು ಹೊರಬಂದು ಎರಡು ಬಾರಿ ತನ್ನ ಹೊರ ಪೊರೆಯನ್ನು ಕಳಚುತ್ತದೆ. ಅಲ್ಲಿಯೇ ಅದು ದೊಡ್ಡ ಹುಳುವಾಗಿ ಬೆಳವಣಿಗೆ ಹೊಂದುತ್ತದೆ. ದುಂಡು ಜಂತು ಮತ್ತು ಕೊಕ್ಕೆಹುಳುವಿನಂತೆ ಈ ಹುಳುವಿನ ಬೆಳವಣಿಗೆಗೆ ರಕ್ತ ಸ್ನಾನದ ಅಗತ್ಯವಿಲ್ಲ.

ಗುಣಲಕ್ಷಣಗಳು

ಗರ್ಭ ತಳೆದ ಹೆಣ್ಣು ದಾರದ ಹುಳು ಗುದಪ್ರದೇಶ (Perianal region) ದಲ್ಲಿ ಚಲಿಸುವಾಗ, ಮತ್ತು ಅಲ್ಲಿರಿಸಲ್ಪಟ್ಟ ಮೊಟ್ಟೆಗಳ ಫಲವಾಗಿ, ಆ ಪ್ರದೇಶದಲ್ಲಿ ವಿಪರೀತ ತುರಿಕೆ, ಕೆರೆತ ಉಂಟಾಗುತ್ತದೆ. ಅದನ್ನು ವಿಶೇಷವಾಗಿ ಕೆರೆದು ಆ ಪ್ರದೇಶದಲ್ಲಿನ ಚರ್ಮದ ಹೊರ ಪದರುಗಳು ಉದುರಿ ಅಲ್ಲಿ ಹುಣ್ಣು ತೋರಿಬರಬಹುದು.

ಅಲ್ಲದೆ ಮಕ್ಕಳಲ್ಲಿ ನಿದ್ರಾಹೀನತೆ, ದೈಹಿಕ ಅಸ್ವಾಸ್ಥ, ಕೈಕಾಲು ನಡುಕ ಮತ್ತು ಮೂರ್ಛಾರೋಗವೂ ತೋರಿ ಬರುತ್ತದೆ.


ರೋಗ ನಿದಾನ

ದಾರದ ಹುಳು ರೋಗದ ಇರುವಿಕೆಯನ್ನು ನಿರ್ಧರಿಸುವಲ್ಲಿ ಮಲದ ಪರೀಕ್ಷೆ ಮುಖ್ಯವಾದುದು. ಗುದ ಪ್ರದೇಶದ ಚರ್ಮದ ಮೇಲೆ ಸೆಲ್ಲೋಫೇನ್ ಒರಸುಕಡ್ಡಿ (Swab) ಯಿಂದ ಒರೆಸಿ ಅದನ್ನು ಗಾಜಿನ ತುಂಡಿನ ಮೇಲೆ ಹರಡಿ ಸೂಕ್ಷ್ಮದರ್ಶಕದ ಮೂಲಕ ನೋಡಿದರೆ ಈ ಹುಳುವಿನ ಮೊಟ್ಟೆಗಳು ಗೋಚರಿಸುತ್ತವೆ. ಈ ಮೊಟ್ಟೆಗಳು ಒಂದೆಡೆ ನೇರವಾಗಿದ್ದು, ಅದರ ಮತ್ತೊಂದು ಪಾರ್ಶ್ವ ಬಾಗಿರುತ್ತದೆ. ಒಳಗೆ ಮರಿಯಾಗಿ ರೂಪುಗೊಳ್ಳುತ್ತಿರುವ ಭ್ರೂಣವಿರುತ್ತದೆ. (ಚಿತ್ರ ೮).

ಚಿಕಿತ್ಸೆ

ದಾರದ ಹುಳು ರೋಗಕ್ಕೆ ಪಿಪರ್ಜಿನ್ ಮುಖ್ಯವಾದ ಕರುಳುಹುಳು ರೋಧಕವಾಗಿ ಕೆಲಸ ಮಾಡುತ್ತದೆ. ಈ

ಔಷಧಿಯನ್ನು, ಒಂದು ಕೆ. ಜಿ. ದೈಹಿಕ ತೂಕಕ್ಕೆ ೫೦ ಮಿಲಿ ಗ್ರಾಂನಂತೆ, ಒಂದು ವಾರದ ಪರ್ಯಂತ ಮಕ್ಕಳಿಗೆ ರಾತ್ರಿಯ



ಚಿತ್ರ ೮
ದಾರದ ಹುಳುವಿನ ಮೊಟ್ಟೆ

ವೇಳೆ ಕೊಡಬೇಕು. ಅದನ್ನು ಔಷಧಿ ಅಥವಾ ರಸಾಯನ ರೂಪದಲ್ಲಿ ಕೊಡಬಹುದು. ಅದನ್ನು ಒಂದು ವಾರದ ಅನಂತರ ಪುನರಪಿ ಕೊಡಬಹುದು.

ಈ ಔಷಧವಲ್ಲದೆ ಹೆಕ್ಸೈಲ್ ರಿಸಾರ್ಸಿನಾಲ್, ಜೆನ್ಷಿಯನ್ ವಯೊಲೆಟ್, ವಿಪ್ರಿನಿಯಂ ಎಂಬೋನೇಟ್, ಡೈಮ್ಯಾಂಥೀನ್ ಹೈಡ್ರೋಕ್ಲೋರೈಡ್ ಮತ್ತು ಡೈಥಯಾಜಿನ್ ಅಯೋಡೈಡ್ ಕರುಳುಹುಳು ರೋಧಕವನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಚರ್ಮದ ಉರಿತವನ್ನು ಕಡಿಮೆ ಮಾಡಬಲ್ಲ ಶಕ್ತಿ ಪಾದರಸದ ಹಳದಿ ಆಕ್ಸೈಡ್ ಮುಲಾಮಿಗಿದೆ. ಅದನ್ನು ಹುಣ್ಣಾದ ಗುದ ಪ್ರದೇಶದಲ್ಲಿ ಸವರಬೇಕು.

ನಿರೋಧಕ ಕ್ರಮಗಳು

ದಾರದ ಹುಳುವಿನ ರೋಗತಡೆಗಟ್ಟುವಲ್ಲಿ ವೈಯಕ್ತಿಕ ನೈರ್ಮಲ್ಯಕ್ಕೆ ಹೆಚ್ಚು ಮಹತ್ವವಿದೆ. ಮಕ್ಕಳ ಉಗುರು

ಗಳನ್ನು ಕತ್ತರಿಸಿ, ಅಲ್ಲಿ ಕೊಳೆ ಕಶ್ಮಲ ಸೇರಿಕೊಳ್ಳದಂತೆ ನೋಡಿಕೊಳ್ಳಬೇಕು. ಕೈಗಳನ್ನು ಚೊಕ್ಕಟವಾಗಿರಿಸಬೇಕು. ಹಾಸಿಗೆಯ ಬಟ್ಟೆಗಳು ಶುಭ್ರವಾಗಿರಬೇಕು. ಅನೇಕ ಮಕ್ಕಳು ಕೂಡಿ ಒಂದೇ ಹಾಸಿಗೆಯ ಮೇಲೆ ಮಲಗಿದಾಗ ರೋಗ ಅವರಿಗೂ ಹರಡುವ ಸಂಭವ ವಿಶೇಷವಾಗಿರುತ್ತದೆ. ರೋಗದ ಚಿಕಿತ್ಸೆಯನ್ನು ಎಲ್ಲರಿಗೂ ಸಾಮೂಹಿಕವಾಗಿ ಮಾಡಿ ಹುಳುವನ್ನು ದೂರಮಾಡಬೇಕು.

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೨೨	೧೪	ರಕ್ತಕರಗೆ	ರಕ್ತಕರಣೆ
೨೮	೧೫	Microcyte	Microcytic

ಉಪನ್ಯಾಸ ಗ್ರಂಥಮಾಲೆ

ಇತ್ತೀಚಿನ ಪ್ರಕಟನೆಗಳು

ಮಾನವ ವಿಜ್ಞಾನ ಹಾಗೂ ಆಧುನಿಕ ಭಾರತ
—ಎಲ್. ಎಸ್. ಐನಾಪೂರ

ಹಳ್ಳಿಗರೇಳ್ಗೆ ಸಾಧಿಸುವ ಬಗೆ
—ಬಿ. ಆರ್. ಪಾಟೀಲ

ಸಾಮಾಜಿಕ ಭದ್ರತೆ
—ಎಚ್. ವ್ಹಿ. ನಾಗೇಶ

ಸಾಮಾಜಿಕ ಸಮಸ್ಯೆಗಳು
—ಕೆ. ಜಿ. ಜೋಶಿ

ಕರ್ನಾಟಕದಲ್ಲಿ ನವಶಿಲಾಯುಗ
—ಬಾ. ರಾ. ಗೋಪಾಲ್

ಜೀವಾವಶೇಷಗಳು
—ಎಂ. ಎಸ್. ಮನ್ನಿಕೇರಿ

ವಿಜಯನಗರ ಕಾಲದ ಧಾರ್ಮಿಕ ಜೀವನ
—ಸದ್ಯೋಜಾತ ಸ್ವಾಮೀಜಿ

ಡಾ|| ಖೊರಾನಾ ಅವರ ಸಂಶೋಧನೆಗಳು
—ಎಚ್. ಕೆ. ಮಲ್ಲಿಕಾರ್ಜುನಪ್ಪ

ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ
—ಎಲ್. ಜಿ. ಜೋಶಿ

ಕಾರ್ಮಿಕ ಮತ್ತು ಯೋಜನೆ
—ಟಿ. ಕೆ. ಮೋಟಿ

ಭಾರತೀಯ ಹಬ್ಬಗಳು
—ಸಿ. ವ್ಹಿ. ಕೆರಿಮನಿ

ಕುಷ್ಠರೋಗ ನಿವಾರಣೆ
—ಡಾ|| ಎಸ್. ಜಿ. ನಾಗಲೋಟಿಮಠ

ಶ್ರವಣಾತೀತ ಧ್ವನಿ
—ಪ್ರೊ|| ಡಿ. ಆರ್. ಬಳೂರಗಿ

ಸಿಮೆಂಟ್ ಕಾಂಕ್ರೀಟ್
—ಪ್ರೊ|| ಬಸವರಾಜ ಪುರಾಣಿಕ

ಜನಪದ ಕಾವ್ಯ
—ಗಿರಡ್ಡಿ ಗೋವಿಂದರಾಜ

ವ್ಯಾಸಂಗವಿಸ್ತರಣ ಮತ್ತು ಪ್ರಕಟನವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩